ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 19th December 1972. Margasira 28, 1894 S. E.

The House met in the Assembly Chamber, Vidhana Soudha, at Twelve of the Clock.

MADAM SPEAKER : (Smt. K. S. Nagarathnamma) in the Chair,

Report on the Scarcity Conditions in Several parts of the State Presentation

MADAM SPEAKER : Sri C. M. Arumugam to present the report regarding the scarcity conditions prevailing in several parts of the State.

Sri C. M. ARUMUGAM (K. G. F) : I present the report regarding scarcity conditions in Bidar, Gulbarga, parts of Bijapur and parts of Belgaum in the State of Mysore.

MADAM SPEAKER : The report is Presented.

Mr. M. S. Krishnan may continue his inconclusive speech.

OFFICIAL RESOLUTION

Re : Ceiling on urban Immovable Property and Acquisition of such Property.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :—ಮಾನ್ಯ ಸಭಾಧ್ಯಕ್ಷಣಿಯವರೇ ನಾನು ಮೊನ್ನೆದಿವಸ ನಗರಾಸ್ತಿಮಿತಿಯ ಬಗ್ಗೆ ಏನೂ ನಿರ್ಣಯವನ್ನು ಮಾನ್ಯ ಕಂದಾಯ ಸಚಿವರು ತೆಗೆದುಕೊಂಡುಬಂದಿದ್ದರೋ ಅದರ ಬಗ್ಗೆ ಮಾತನಾಡುತ್ತಿದ್ದೆ. ಈಗಾಗಲೇ ನಾನು ಒಂದೆರಡು ಅಂಶಗಳನ್ನು ಹೇಳಿದ್ದೇನೆ. ಅದರ ಬಗ್ಗೆ ಪುನರುಚ್ಚಾರಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೂ ಸಹ ಆಂಶ ಏನು ಎಂಬುದನ್ನು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಈ ನಿರ್ಣಯವನ್ನೇನೂ ತೆಗೆದು ಕೊಂಡು ಬಂದಿದ್ದಾರೆ ಇದು ಒಂದು ಸೋಷಲಿಷ್ಟ್ ಮೇಜರ್, ಸಮತಾವಾದಿ ಕ್ರಮ ಎಂದು ಹೇಳುತ್ತಾರೆ. ಆದರೆ ಇದನ್ನು ಆ ರೀತಿ ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳಿದ್ದೇನೆ. ಸಮಾಜವಾದಿ ಕ್ರಮ ಎಂದರೆ ಮೂಲಭೂತ ಜಮೀನು ಮತ್ತು ಮನೆ ಇವು ಸಮಾಜಕ್ಕೆ ಜನಸಾಮಾನ್ಯರಿಗೆ ಸೇರಬೇಕಾದಂಥಾದ್ದೇ ವಿನಾ ಯಾರೋ ಕೆಲವರ ಸ್ವತ್ತು ಆಗುವುದಿಲ್ಲ ಎಂದು ನಾನು ಪ್ರಸ್ತಾಪ ಮಾಡಿದ್ದೇನೆ.

(ಶ್ರೀ ಎಂ.ಎಸ್. ಕೃಷ್ಣನ್)

ಎರಡನೆಯದಾಗಿ ಈ ನಿರ್ಣಯವನ್ನು ತರುವಂತಹ ಪರಿಸ್ಥಿತಿಗೆ ಯಾತಕ್ಕೆ ಬಂದಿರಿ ಎನ್ನುವುದರ ಬಗ್ಗೆ ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡುತ್ತಿದ್ದೆ. ಇವೊತ್ತು ಈ ನಿರ್ಣಯ ಶಾಸನ ಸಭೆಗಳ ಹಕ್ಕನ್ನು ಮೊಟಕು ಮಾಡುವಂತಹ ರೀತಿಯಲ್ಲಿದೆ. ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮತ್ತೆ ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯವಾಗಿ ಈ ನಿರ್ಣಯವನ್ನು ತೆಗೆದುಕೊಂಡು ಬಂದಿರುವುದನ್ನು ನೋಡಿದರೆ ನಮಗೆ ಅನಿಸುತ್ತದೆ ಇದನ್ನು ಕೇಂದ್ರ ಸರ್ಕಾರದವರು ಒತ್ತಿಒತ್ತಿ ಇದನ್ನು ಮಾಡಿಸಿದ್ದಾರೆ. ಕೇಂದ್ರ ಸರ್ಕಾರದವರ ಒತ್ತಾಯಕ್ಕೆ ಇಲ್ಲಿ ಆಳುವ ಪಕ್ಷ ಮಣಿದಿದೆ ಎಂದು ನಾನು ಹೇಳಬೇಕಾಗಿದೆ. ೬ ರಾಜ್ಯಗಳಲ್ಲಿ ಈಗಾಗಲೇ ಈ ತರಹ ನಗರಾಸ್ತಿಮಿತಿ ಮಸೂದೆಯನ್ನು ತೆಗೆದುಕೊಂಡುಬಂದಿದ್ದಾರೆ. ಅವರು ಈಗಾಗಲೇ ಈ ನಗರಾಸ್ತಿಮಿತಿಯ ಮಸೂದೆಯನ್ನು ಪಾಸು ಮಾಡಿ ಕಳುಹಿಸಿದ್ದಾರೆ. ಘಟನಾವಳಿಯ ಪ್ರಕಾರ ಅರ್ಧ ರಾಜ್ಯಗಳು ಇದನ್ನು ಈಗಾಗಲೇ ಪಾಸುಮಾಡಿವೆ. ಈ ನಿರ್ಣಯವನ್ನು ಪಾಸು ಮಾಡಬೇಕಾದ್ದು, ಜಾರಿಗೆ ತರಬೇಕಾದ್ದು ೬ ರಾಜ್ಯಗಳು ಮಾಡಿ ೨ ರಾಜ್ಯಗಳು ಮಾತ್ರ ಉಳಿದಿವೆ ಎಂದು ಕಾಣುತ್ತದೆ ಇಷ್ಟೊಂದು ಆತುರ ಆತುರವಾಗಿ ಒತ್ತಾಯವನ್ನು ತಮ್ಮ ಮೇಲೆ ಏತಕ್ಕೆ ತಂದಿದ್ದಾರೆ ? ನೀವು ಅವರಿಗಿಂತ ಸ್ವಲ್ಪ ಪ್ರಗತಿಪರರಾಗಿದ್ದೀರಿ. ಶ್ರೀಮಾನ್ ಹೆಂಚ್ಚಮಾಸ್ತಿಗೌಡರು ಒಂದು ಡ್ರಾಫ್ಟ್ ಬಿಲ್ಲನ್ನು ಮಾಡಿದ್ದರು ಎಂದು ನಾನು ಮೊದಲೇ ಹೇಳಿದ್ದೇನೆ. ಇದನ್ನು ಶ್ರೀಮಾನ್ ಕೃಷ್ಣಾ ಅವರು ಒಪ್ಪಿಕೊಳ್ಳಲಿಲ್ಲ. ಈ ಡ್ರಾಫ್ಟ್ ಬಿಲ್ಲು ಸೆಕ್ರೆಟರಿಯವರ ಹತ್ತಿರ ರೆಡಿಯಾಗಿದೆ. ಇದರ ಕಾಪಿಯನ್ನು ಬೇಕಾದರೆ ನಾನು ತಮಗೆ ಕೊಡುತ್ತೇನೆ. ಅದರಲ್ಲಿ ನಗರಾಸ್ತಿಮಿತಿಯನ್ನು ೨ ಲಕ್ಷ ರೂಪಾಯಿಗಳ ಮಿತಿಯನ್ನು ಇಟ್ಟಿದ್ದಾರೆ. ಅದನ್ನು ಇಟ್ಟಿಲ್ಲ ಎಂದು ಅವರು ಹೇಳಲಿ. ಕೇಂದ್ರ ಸರ್ಕಾರದವರು ೫ ಲಕ್ಷ ರೂಪಾಯಿ ಮಿತಿಯನ್ನು ಇಡಬೇಕೆಂದು ಹೇಳಿದ್ದಾರೆ. ಅವರು ಫ್ಯಾಮಲಿ ಎನ್ನುವ ಡೆಫಿನೀನಿಶ್ನಗೆ ಮೈನರ್, ಮೇಜರ್ ಯಾವುದೂ ಹೇಳದೆ ೫ ಜನ ಎಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದ ಸ್ಟಡಿ ಗ್ರೂಪ್‌ನವರು ಗಂಡ ಹೆಂಡತಿ ಮತ್ತು ೩ ಜನ ಮೈನರ್ ಚಿಲ್ಡ್ರನ್ ಎಂದು ಮಾಡಿದ್ದಾರೆ. ಈಗ ಪ್ರಗತಿಗೆ ವಿರೋಧವಾದ ಸೂಚನೆಗಳು ಬಂದಿವೆ. ನಿಮ್ಮ ಡ್ರಾಫ್ಟ್ ಬಿಲ್ಲಿನಲ್ಲಿ ಕೈಗಾರಿಕೆಗಳಿಗೆ ಸಂಬಂಧಪಟ್ಟ ಸ್ವತ್ತುಗಳು ಏನಿವೆ ಅವುಗಳಿಗೆ ವಿನಾಯಿತಿ ಕೊಡಕೂಡದು ಎಂಬ ಅಂಶ ಇದೆ. ಆದರೆ ಕೇಂದ್ರ ಸರ್ಕಾರದ ಬಿಲ್ಲಿನಲ್ಲಿ ಕೈಗಾರಿಕೆಗಳಿಗೆ ಸಂಬಂಧಪಟ್ಟ ಸ್ವತ್ತುಗಳಿಗೆ ವಿನಾಯಿತಿಯನ್ನು ಕೊಡಂವುದು ಎನ್ನುವ ಅಂಶ ಬಂದಿದೆ. ಹೊಟೇಲುಗಳು ಸಿನಿಮಾಗಳು ಮತ್ತು ದೊಡ್ಡದೊಡ್ಡ ಅಂಗಡಿಗಳಿಗೆ ವಿನಾಯಿತಿ ಕೊಡಬೇಕು ಎಂದು ಮಾಡಿರುವುದು ತೀರಾ ಅನ್ಯಾಯ. ಇದರಲ್ಲಿ ಎಳ್ಳಷ್ಟೂ ಸೋಷಲಿಸ್ಟ್ ತತ್ವವನ್ನು ಒಪ್ಪಿಕೊಂಡಿಲ್ಲ ಸೋಷಲಿಸ್ಟ್ ಬಿಲ್ ಮಾಡುತ್ತೇವೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಹೇಳಿದಂತೆ ಜನ ವರ್ತಿಸುತ್ತಾರೆಯೇ ಎಂದು ನಮ್ಮ ರಾಜ್ಯದ ಜನ ತಿಳಿದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಇದರ ಬಗೆ ವಿನಾಯಿತಿ ಕೊಡಬೇಕಾಗಿಲ್ಲ, ಡ್ರಾಫ್ಟ್ ಬಿಲ್ಲಿನಲ್ಲಿ ವಿನಾಯಿತಿ ಕೊಡಕೂಡದು ಎಂದು ಇದೆ. ಒಂದು ಒಳ್ಳೆಯ ಬಿಲ್ಲನ್ನು ತೆಗೆದುಕೊಂಡು ಬರಬೇಕು ಎಂದು ಯೋಚನೆ ಮಾಡುವಾಗ ಕೇಂದ್ರ ಸರ್ಕಾರದವರು ಏತಕ್ಕೆ ಒತ್ತಾಯ ತಂದು ಇವರ ಬಿಲ್ಲನ್ನು ಮೂಲೆಗೆ ಇಟ್ಟು ಬೇರೆ ರೆಸಲ್ಯೂಷನ್ ಪಾಸುಮಾಡಿಕೊಡಿ ಎಂದು ಏತಕ್ಕೆ ಹೇಳಿದರು. ನಮ್ಮ ದೇಶದಲ್ಲಿ ಭಾರಿಭಾರಿ ಶ್ರೀಮಂತರು, ಗುತ್ತೆದಾರರು ಬಂಡವಾಳಗಾರರು ಕೋಟ್ಯಾಧೀಶ್ವರರು ಇರುವಾಗ ಕೇಂದ್ರ ಸರ್ಕಾರಕ್ಕೆ ಏತಕ್ಕೆ ಮಣಿಯಬೇಕು ? ಗರೀಬಿಹಠಾವೋ ಮಾಡುವವರ ಪರವಾಗಿ ಅನುಕೂಲವನು ಕಡಿಮೆ ಮಾಡುವ ಅವಶ್ಯಕತೆ ಏನಿದೆ ? ಈ ರೀತಿ ರಾಜ್ಯಗಳ ಮೇಲೆ ಕೇಂದ್ರ ಸರ್ಕಾರದವರು ಒತ್ತಾಯವನ್ನು ತಂದು ನಿರ್ಣಯವನ್ನು ಪಾಸು ಮಾಡಿಕೊಡಿ ಎಂದು ಹೇಳುವುದು ಸರಿಯಲ್ಲ. ಕೈಗಾರಿಕೆಗಳಿಗೆ ಸಂಬಂಧಪಟ್ಟ ಸ್ವತ್ತುಗಳಿಗೆ ಎಗ್ಸಂಪ್ಷನ್ ಕೊಟ್ಟಿರುವುದು ಸರಿಯಲ್ಲ. ಅದರಲ್ಲಿ ಯಾವ ಅರ್ಥವೂ ಇಲ್ಲ. ಈ ರೀತಿ ಅರಬಾನ್ ಸೀಲಿಂಗ್ ಪ್ರಾಪರ್ಟಿ ತೆಗೆದುಕೊಂಡು ಬರುವುದರಲ್ಲಿ ಅರ್ಥವಿಲ್ಲ. ಅಗ್ರಿಕಲ್‌ಚರಲ್ ಸೆಕ್ಟಾರ್ ಮೇಲೆ ಯಾವಾಗ ಮಿತಿಯನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದರೋ ಆಗ ಅವರು ನಮ್ಮ ಮೇಲೆ ಮಾತ್ರ ಮಿತಿಯನ್ನು ಹಾಕಿ ನಗರಾಸ್ತಿಯ ಮೇಲೆ ಏತಕ್ಕೆ ಮಿತಿಯನ್ನು ಹಾಕಬಾರದು ಎನ್ನುವ ಪ್ರಶ್ನೆ ಬಂದಿರುವುದರಿಂದ ಅವರನ್ನು ಸ್ವಲ್ಪಮಟ್ಟಿಗೆ ಸಮಾಧಾನ ಮಾಡೋಣ ಎಂದು ಇದನ್ನು ತೆಗೆದುಕೊಂಡು ಬಂದಿದ್ದಾರೆ. ಇದನ್ನು ತೆಗೆದುಕೊಂಡು ಬಂದಿರುವುದು ಒಳ್ಳೆಯದು. ಆದರೆ ಇದರಲ್ಲಿ ಮೂಲ ಉದ್ದೇಶ ಏನಿದೆ ಅದನ್ನು ಟ್ಯಾಕಲ್ ಮಾಡಬೇಕು. ಈ ಸಮಸ್ಯೆ ಯಾವ ರೀತಿ ಇದೆ ಎಂದರೆ ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ಬಡವರು ಮತ್ತು ಮಧ್ಯಮವರ್ಗದವರ ಕಷ್ಟಗಳು ಏನಿವೆ ಎಂಬುದನ್ನು ತಿಳಿದುಕೊಂಡು ಆ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನಮಾಡಬೇಕು. ಈಗ ಕೇಂದ್ರಸರ್ಕಾರದವರು ಮಾತಿಗೆ ಕಟ್ಟು ಬಿದ್ದು ತೇಪೆ ಹಾಕುವ ಹಾಗೆ ನಿರ್ಣಯವನ್ನು ತಂದು ಕೇಂದ್ರ ಸರ್ಕಾರಕ್ಕೆ ಮಣಿಯುವ ಹಾಗೆ ಮಾಡಿದ್ದಾರೆ.

ಇದು ಶುದ್ಧವಾದ ಅಕ್ಷಮ್ಯ ಅಪರಾಧವೆಂದು ಹೇಳುತ್ತೇನೆ. ನಿಮಗೂ ಕೇಂದ್ರ ಸರಕಾರಕ್ಕೂ ಜಗಳ ತರಬೇಕೆಂದು ನಾನು ಈ ವಿಷಯವನ್ನು ಹೇಳುತ್ತಿಲ್ಲ. ನಿಮಗೂ ಕೇಂದ್ರಕ್ಕೂ ತಾತ್ವಿಕವಾದಂಥ ತಿಕ್ಕಾಟ ವಾದರೆ ಪರವಾಗಿಲ್ಲ, ಆದರೆ ನೀವು ಇಂದು ಕೇಂದ್ರಕ್ಕೆ ಅಧಿಕಾರ ಕೊಡುವುದರ ಮೂಲಕ ಬಂಡವಾಳ ಗಾರರಿಗೆ ರಿಯಾಯಿತಿ ಕೊಡುತ್ತಿದ್ದೀರಿ ಮತ್ತು ಅವರಿಗೆ ಮಣಿದಿದ್ದೀರಿ ಎಂದು ಹೇಳಬೇಕಾಗಿದೆ. ಕೇಂದ್ರಕ್ಕೆ ಅಧಿಕಾರ ಕೊಡುವುದರಿಂದ ಕೆಲವು ಅಪಾಯಗಳು ಸಹ ಇವೆ. ಒಂದು ಕಡೆ ಡ್ರಾಫ್ಟ್ ಬಿಲ್ ತಯಾರಿಸಿ ಅದನ್ನು ಹಾಗೆಯೇ ಇಟ್ಟು ಈ ರೀತಿ ನಿರ್ಣಯ ಮಾಡುವುದು ಸರಿಯೇ ಎಂದು ಕೇಳುತ್ತೇನೆ. ನಗರಾಸ್ತಿಯ ಮೇಲೆ ಒಂದು ಪಕ್ಷ ೫ ಲಕ್ಷ ರೂಪಾಯಿಗಳ ವಿನಾಯಿತಿ ತೋರಿಸಿದರೆ ಅದರಿಂದ ಲ್ಯಾಂಡ್ ಸೀಲಿಂಗ್‌ಗೆ ಧಕ್ಕೆ ಬರುತ್ತದೆ. ೫ ಲಕ್ಷ ಮಿತಿ ಇಟ್ಟರೆ ಭೂಮಾಲೀಕರು ಸಹ ನಮ್ಮ ದೇಶವನ್ನು ಪ್ರತಿಗಾಮಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈಗಾಗಲೇ ಕೆಲವರು ಮಾಡುತ್ತಿದ್ದಾರೆ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಯುತ್ತದೆಂಬುದನ್ನು ಸರ್ಕಾರದವರು ಗಮನಿಸಬೇಕು. ಭೂಮಿತಿ ೧೦ ಎಕರೆ ಇರಬೇಕೆಂದು ತಾವು ನಿರ್ಣಯ ಮಾಡಿದ್ದರೂ ಸಹ ಅದನ್ನು ೨೦ ಅಥವಾ ೧೫ಕ್ಕೆ ಹೆಚ್ಚಿಸಬೇಕೆಂಬುದರ ಬಗ್ಗೆ ಮಸಲತ್ತು ನಡೆಯುತ್ತಿದೆ ಎಂಬುದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಇದನ್ನು ತಾವು ದಿಟ್ಟತನದಿಂದ ಎದುರಿಸುತ್ತೀರೋ ಇಲ್ಲವೊ ಎಂಬುದನ್ನು ಕಾದು ನೋಡಬೇಕಾಗಿದೆ. ಮೊದಮೊದಲು ವೀರಾವೇಶದಿಂದ ಮಾತನಾಡುತ್ತೀರಿ, ಬರಬರುತ್ತಾ ಏನೂ ಇಲ್ಲದ ಹಾಗೆ ಮಾಡಿ ಸಮಾಜವಾದವೇ ಇಲ್ಲದ ಹಾಗೆ ಮಾಡಿಬಿಡುತ್ತೀರಿ. ಭೂಮಾಲೀಕರಿಗೆ ಅನುಕೂಲವಾಗುವ ಹಾಗೆ ಭೂಮಿತಿಯಂನ್ನು ನಿರ್ಧಾರ ಮಾಡಿದರೆ, ಅದು ಸರ್ಕಾರದ ಸರಿಯಾದ ಧೋರಣೆಯಲ್ಲವೆಂದು ಹೇಳ ಬೇಕಾಗುತ್ತದೆ. ಮೊದಲು ನಗರಾಸ್ತಿಯ ಮಿತಿ ೨ ಲಕ್ಷ ಇರಬೇಕೆಂದು ಮಾಡಿ, ಅದರ ಒಂದು ಅಧಾರದ ಮೇಲೆ ಭೂಮಿತಿ ೧೦ ಎಕರೆ ಇರಬೇಕೆಂದು ನಿಗದಿ ಮಾಡಿದಿರಿ. ಈಗ ಅದನ್ನು ಬದಲಾವಣೆ ಮಾಡಿ ನಗರಾಸ್ತಿ ೫ ಲಕ್ಷ ಇರಬೇಕೆಂದು ಹೇಳುವುದಾದರೆ, ಭೂಮಿತಿಯನ್ನು ಸಹ ಹೆಚ್ಚಿಸಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಎರಡು ಬೆಳೆ ಬರುವ ಜಮೀನನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಸಹ ಅದರ ಒಂದು ವರಮಾನವನ್ನು ನಗರಾಸ್ತಿಯ ವರಮಾನಕ್ಕೆ ಸರಿಸಮಾನವಾಗಿ ಮಾಡುವುದಕ್ಕೆ ಹೋದಾಗ, ಭೂ ಮಾಲೀಕರಿಗೆ ಇನ್ನೂ ಹೆಚ್ಚಿನ ರಿಯಾಯಿತಿ ತೋರಿಸಲೇ ಬೇಕಾಗುತ್ತದೆ. ಆಗ ನೀವು ತಂದಿರುವ ಭೂ ಮಸೂದಾ ಕಾನೂನು ನಿಷ್ಪ್ರಯೋಜಕವಾಗುತ್ತದೆಂದು ನನಗೆ ಕಾಣುತ್ತದೆ ಆದ್ದರಿಂದ ಇದನ್ನು ಸೀರಿಯಸ್ ಆಗಿ ತಾವು ಪುನರ್‌ಪರಿಶೀಲನೆ ಮಾಡಬೇಕೆಂಬ ಯೋಚನೆ ಮಾಡಬೇಕು. ಈಗ ಏನು ಒಂದು ಡ್ರಾಫ್ಟ್ ಬಿಲ್ ತಯಾರು ಮಾಡಿದ್ದೀರಿ, ಅದನ್ನು ಈ ಸಭೆಯ ಮುಂದೆ ಮಂಡಿಸಿ, ಅದನ್ನು ಪಾಸ್ ಮಾಡಿಸಿ, ಕೇಂದ್ರಕ್ಕೆ ಕಳಿಸಿಕೊಟ್ಟರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಈಗ ತಮ್ಮ ಕಡೆ ಮೆಜಾರಿಟಿ ಇದೆ ಎಂದುಕೊಂಡು ಈ ನಿರ್ಣಯ ವನ್ನೇ ಪಾಸ್ ಮಾಡಿ ಕೇಂದ್ರಕ್ಕೆ ಕಳಿಸಿಕೊಡಬಹುದು. ಆ ರೀತಿ ಮಾಡುವಾಗಲಾದರೂ ಸಹ ಅದರ ಜೊತೆಯಲ್ಲಿ ತಾವು ತಯಾರು ಮಾಡಿರುವ ಡ್ರಾಫ್ಟ್ ಬಿಲ್‌ನ್ನು ಕೂಡ ಕಳುಹಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಮತ್ತು ಆ ಡ್ರಾಫ್ಟ್ ಬಿಲ್‌ನಲ್ಲಿರುವ ಅಂಶಗಳೇನು ಎಂಬುದನ್ನು ಈ ಸಭೆಗೂ ಸಹ ತಿಳಿಸಬೇಕು. ಅದರ ಬಗ್ಗೆ ಮರೆಮಾಚುವುದರಿಂದ ಏನೂ ಅನುಕೂಲವಿಲ್ಲ. ಏತಕ್ಕೆ ಮರೆಮಾಚಿದ್ದಾರೊ ಗೊತ್ತಿಲ್ಲ. ಡ್ರಾಫ್ಟ್ ಬಿಲ್ ತಯಾರು ಮಾಡಿರುವುದರಿಂದ, ತಮ್ಮ ಅಭಿಪ್ರಾಯ ಈ ರೀತಿ ಇದೆ ಎಂದು ತಾವು ಕೇಂದ್ರಕ್ಕೆ ಎದೆಗಾರಿಕೆಯಿಂದ ಸ್ಪಷ್ಟವಾಗಿ ತಿಳಿಸಬೇಕು. ನಗರಾಸ್ತಿಯ ಮಿತಿಯ ಬಗ್ಗೆ ಬಿಲ್ ಬಂದಾಗ ಅದರಲ್ಲಿ ಏನೇನು ತೊಡಕುಗಳಿವೆ ಎಂಬುದನ್ನು ಹೇಳುತ್ತೇನೆ. ಈಗ ಹೇಳುವುದಕ್ಕೆ ಹೋಗುವುದಿಲ್ಲ. ಮುಂಖ್ಯವಾಗಿ ಈ ನಿರ್ಣಯದ ಜೊತೆಯಲ್ಲಿ ಡ್ರಾಫ್ಟ್ ಬಿಲ್‌ನ್ನು ಸಹ ಕೇಂದ್ರಕ್ಕೆ ಕಳುಹಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ರಾಜ್ಯದ ಕಂದಾಯ ಮಂತ್ರಿಗಳು ನಗರಾಸ್ತಿ ಮಿತಿಗೆ ಸಂಬಂಧಪಟ್ಟ ಹಾಗೆ ಈ ಸಭೆಯ ಅನುಮತಿಗಾಗಿ ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಈ ನಿರ್ಣಯದ ಪ್ರಕಾರ ಇದನ್ನು ಕಾನೂನು ಮಾಡತಕ್ಕಂತ ಸಂಪೂರ್ಣವಾದ ಹಕ್ಕನ್ನು ಪಾರ್ಲಿಮೆಂಟಿಗೆ ವಹಿಸಿ ಕೊಡಬೇಕು ಎನ್ನುವ ಅರ್ಥದಲ್ಲಿ ಈ ನಿರ್ಣಯವನ್ನು ತಂದಿದ್ದಾರೆ ಇದರ ಬಗ್ಗೆ ಈಗಾಗಲೇ ಮಾತನಾಡಿದಂತಹ ಅನೇಕ ನನ್ನ ಮಿತ್ರರುಗಳು ಒಳ್ಳೆಯ ವಿವರವಾದಂಥ ಒಳ್ಳೆಕೆಯನ್ನು ಕೊಟ್ಟಿದ್ದಾರೆ ನಗರಾಸ್ತಿ ಮಿತಿಯ ಬಗ್ಗೆ ಸರ್ಕಾರದವರು ಈಗಾಗಲೇ ಒಂದು ಬಿಲ್‌ನ್ನು ತಯಾರು ಮಾಡಿರುವುದರಿಂದ ಅದನ್ನು ಸಭೆಯ ಮುಂದೆ ಮಂಡಿಸಬೇಕೆಂದು ಮಾನ್ಯ ಕೃಷ್ಣನ್ ಅವರು ಹೇಳಿದಂತಹ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಆ ಬಿಲ್‌ನ್ನು ಸರ್ಕಾರ ಸಭೆಯ ಮುಂದೆ ತರದೆ ಹಾಗೆಯೇ ಇಟ್ಟಿರುವುದರಲ್ಲಿ ಔಚಿತ್ಯವಿದೆ ಮತ್ತು ಪ್ರಬಲವಾದ ಕಾರಣವಿದೆ ಎನ್ನುವ ಭಾವನೆ ನನಗಿದೆ. ಪಾರ್ಲಿಮೆಂಟ್ ಮತ್ತು ಶಾಸನ ಸಭೆಗಳಿಗೆ ಚುನಾವಣೆಯಾಗುವ ಸಂದರ್ಭದಲ್ಲಿ ಆಡಳಿತ ಕಾಂಗ್ರೆಸ್‌ನವರು ಜನಸಾಮಾನ್ಯರಿಗೆ ಅನೇಕ ಆಶ್ವಾಸನೆಗಳನ್ನು ಕೊಟ್ಟಿದ್ದರು. ಆದರೆ ಅಧಿಕಾರಕ್ಕೆ ಬಂದ ಮೇಲೆ ಆ

(ಶ್ರೀ ಸಿ. ಬೈರೇಗೌಡ)

ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ನಿರ್ವಹಿಸುತ್ತಿದ್ದಾರೆಂಬುದನ್ನು ಕಣ್ಣಾರೆ ನೋಡಿದ ಮೇಲೆ ಹೇಳುವುವಾದರೆ, ಇವರು ಹೇಳಿದ್ದಕ್ಕೂ ಆಚರಣೆಯಲ್ಲಿ ತರುತ್ತಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂದು ಹೇಳಬಹುದು. ಇವೊತ್ತಿನ ದಿವಸ ಪ್ರತಿ ರಾಜ್ಯದಲ್ಲಿಯೂ ವಿಶಿಷ್ಟವಾದ ಪದ್ಧತಿಗಳು ಮತ್ತು ವಿಶಿಷ್ಟವಾದ ಕಾರಣಗಳು ಇದ್ದರೂ ಸಹ ನಗರಾಸ್ತಿ ಮಿತಿಯ ಬಗ್ಗೆ ಕಾನೂನು ಮಾಡಲು ಕೇಂದ್ರಕ್ಕೆ ತಮ್ಮ ಸಂಪೂರ್ಣವಾದ ಅಧಿಕಾರವನ್ನು ಕೊಡುವ ಉದ್ದೇಶವಾದರೂ ಏನು ಎಂಬುದು ಗೊತ್ತಾಗುತ್ತಿಲ್ಲ. ಇದರಲ್ಲಿ ಏನೋ ಮೋಸ ಮಂತ್ರ ತಂತ್ರ ಇದೆ ಎಂದು ನನ್ನ ಭಾವನೆ. ಇವೊತ್ತಿನ ದಿವಸ ಕೇಂದ್ರ ಸರ್ಕಾರ ನಮ್ಮ ದೇಶದಲ್ಲಿರತಕ್ಕಂತ ಗುತ್ತೇದಾರಿ ಬಂಡವಾಳಶಾಹಿ ಮತ್ತು ಭೂಮಾಲೀಕರ ವಶದಲ್ಲಿರತಕ್ಕಂಥ ಕೈಗೊಂಬೆಯಾಗಿದೆ. ಈ ಕಾರಣದಿಂದ ಜನಸಾಮಾನ್ಯರಿಗೆ ಕೊಟ್ಟಂತಹ ಆಶ್ವಾಸನೆಗಳನ್ನು ಈಡೇರಿಸುವುದಕ್ಕಾಗುತ್ತಿಲ್ಲ. ಇಂದು ನಮ್ಮ ದೇಶದಲ್ಲಿ ೭೫ ಬಂಡವಾಳಶಾಹಿ ಕುಟುಂಬಗಳಿವೆ. ಇವುಗಳನ್ನು ಮಟ್ಟುವ ಒಂದು ಎದೆಗಾರಿಕೆಯಾಗಲೀ ಅಥವಾ ಧೈರ್ಯವಾಗಲೀ ಕೇಂದ್ರ ಸರ್ಕಾರಕ್ಕೆ ಇಲ್ಲ ಮತ್ತು ರಾಜ್ಯ ಸರ್ಕಾರಗಳಿಗೆ ಮೊದಲೇ ಧೈರ್ಯವಿಲ್ಲ. ಇವೊತ್ತು ರಾಜ್ಯಗಳಲ್ಲಿ ಅಧಿಕಾರದಲ್ಲಿರತಕ್ಕಂತ ಕಾಂಗ್ರೆಸ್ (ಆರ್) ಸರ್ಕಾರಗಳು ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿ ಆಡಳಿತವನ್ನು ನಿರ್ವಹಿಸುತ್ತಿವೆ. ಪ್ರಧಾನಮಂತ್ರಿಗಳು ಏನು ಹೇಳುತ್ತಾರೋ ಅದರಂತೆ ಆಡಳಿತ ನಡೆಸುತ್ತಿದ್ದಾರೆ. ಪ್ರತಿ ನಿಮಿಷ, ಪ್ರತಿ ಗಳಿಗೆಯಲ್ಲಿಯೂ ಸಹ ಕೇಂದ್ರ ಸರ್ಕಾರದವರ ಮಾತನ್ನೇ ಅವಲಂಬಿಸಿ ರಾಜ್ಯಭಾರವನ್ನು ನಡೆಸುವ ಮಟ್ಟಕ್ಕೆ ಇಳಿದಿದ್ದಾರೆ. ಈಗ ತಂದಿರುವ ನಿರ್ಣಯವೂ ಸಹ ಇದನ್ನೇ ಅವಲಂಬಿಸಿದೆಯೆಂಬುದು ವ್ಯಕ್ತವಾಗುತ್ತಿದೆ. ಇವೊತ್ತು ದೇಶದಲ್ಲಿರತಕ್ಕಂಥ ೭೫ ಕುಟುಂಬಗಳಿಗೆ ಸೇರಿದ ಎಲ್ಲ ಬಿಸ್‌ನೆಸ್ ಹೌಸನ್ನು ರಾಷ್ಟ್ರೀಕರಣ ಮಾಡಿ ಸಮಾಜದ ಸ್ವತ್ತನ್ನಾಗಿ ಮಾಡುತ್ತೇವೆ ಎಂದು ಹೇಳುವ ಎದೆಗಾರಿಕೆ ಕೇಂದ್ರ ಸರ್ಕಾರಕ್ಕೆ ಇಲ್ಲ. ಅವರಿಗೇ ಇಲ್ಲದೆ ಹೋದಾಗ ರಾಜ್ಯ ಸರಕಾರಕ್ಕೂ ಇರುವುದಿಲ್ಲ ಮುಖ್ಯವಾಗಿ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸ್‌ರವರಿಗೂ ಸಹ ಅಂತಹ ಒಂದು ಎದೆಗಾರಿಗೆ ಇದೆಯೇ ಎಂದರೆ, ಖಂಡಿತವಾಗಿ ಇಲ್ಲ ಎಂದು ಹೇಳಬಹುದು ಇವೆಲ್ಲಾ ಕಾರಣಗಳಿಂದ ನಗರಾಸ್ತಿ ಮಿತಿಯ ಬಗ್ಗೆ ಕೇಂದ್ರ ಸರ್ಕಾರದವರು ಪಾರ್ಲಿಮೆಂಟ್ ಮುಂದೆ ಯಾವ ತರಹದ ಬಿಲ್ ತರುತ್ತಾರೆಂಬುದು ನಮಗೆ ಗೊತ್ತಾಗುತ್ತಿಲ್ಲ.

ನಮ್ಮ ಜನರಿಂದ ಚುನಾಯಿತರಾದ ಈ ಸಭೆಯಲ್ಲಿರುವ ಪ್ರತಿನಿಧಿಗಳು ಮೈಸೂರು ರಾಜ್ಯಕ್ಕೆ ಅನುಕೂಲವಾದ ಒಂದು ಕಾನೂನನು ಮಾಡುವುದಕ್ಕೆ ಬದಲಾಗಿ ಇಂತಹ ಒಂದು ಮಿತಿ ಹಾಕುವ ಕಾನೂನನ್ನು ಕೇಂದ್ರ ಸರಕಾರಕ್ಕೆ ವಹಿಸಿಕೊಡಬೇಕೆಂದು ಮಾಡುವುದರಿಂದ ಇಲ್ಲಿನ ಪರಿಸ್ಥಿತಿ ಏನಾಗುತ್ತದೆ ಎನ್ನುವುದರ ಬಗ್ಗೆ ವಿಚಾರ ಮಾಡಿಲ್ಲ, ನಮ್ಮ ರಾಜ್ಯದಲ್ಲಿರತಕ್ಕ ಸುಮಾರು ೬೦–೭೦ ಕುಟುಂಬಗಳಿಗೆ ಮಾತ್ರ ಮಿತಿ ಹಾಕಿ ಇತರ ಜನರು ವ್ಯಾಪಾರ ಇತ್ಯಾದಿಗಳಲ್ಲಿರುವವರ ಕಡೆಗೆ ಯಾವ ಮಿತಿಯನ್ನೂ ಹಾಕದೆ ಇಲ್ಲಿ ಕಾನೂನು ಮಾಡಿದರೆ ಅದರಿಂದೇನು ಉಪಯೋಗವಾಗುವುದಿಲ್ಲ, ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯ ಸರಕಾರ ಕೇಂದ್ರ ಸರಕಾರದವರಿಗೆ ಈ ಅಧಿಕಾರವನ್ನು ಕೊಟ್ಟು ಅವರೇ ಕಾಯಿದೆ ಮಾಡಬೇಕೆಂದು ಹೇಳುವುದು ಇದು ಯಾವ ರೀತಿಯಾದ ಸಮಾಜವಾದ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ದೇಶದಲ್ಲಿ ಸಮಾಜವಾದ ತರುತ್ತೇವೆ ಮತ್ತು ಇದಕ್ಕನುಗುಣವಾದಂತಹ ಕ್ರಾಂತಿಕಾರಕವಾದ ಬದಲಾವಣೆಯನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಇಂದು ಇಂತಹ ಒಂದು ಕಾನೂನು ಮಾಡುವುದಕ್ಕೋಸ್ಕರ ಕೇಂದ್ರ ಸರಕಾರಕ್ಕೆ ವಹಿಸುವುದು ಇದು ಬುದ್ಧಿವಂತಿಕೆಯಲ್ಲ, ಇದನ್ನು ಮಾಡಲು ಕಾರಣ ನನಗೆ ತೋರುವುದು ರಾಜ್ಯದಲ್ಲಿರುವ ಬಂಡವಾಳಶಾಹಿ ನಿರ್ಮಾಣ ಮಾಡುವವರಿಗಾಗಿ ಅವರಿಗೆ ಮಿತಿ ಸರಿಯಾಗಿ ಇರಲೆಂದು ಮಾಡುತ್ತಿದ್ದಾರೆ ಎನ್ನುವುದು ಇದರಲ್ಲಿ ಸ್ವಾಭಾವಿಕವಾಗಿ ಬರೂಡುತ್ತದೆ. ಇಂತಹ ಒಂದು ಪರಿಸ್ಥಿತಿ ಇರುವಾಗ ಮುಂದೆ ಕೇಂದ್ರದವರು ತರುವ ಕಾನೂನಿನಲ್ಲಿ ಸಿನಿಮಾ ಓನರುಗಳಿಗೆ ಹಾಗೂ ಹೋಟೆಲ್ ಓನರುಗಳಿಗೆ ಕಾಂಪೆನ್‌ಸೇಷನ್ ಕೊಟ್ಟು ಇವರಿಗೆಲ್ಲ ಎಕ್ಸೆಂಪ್ಷನ್ ಕೊಡುವುದಕ್ಕಾಗಿ ಇಲ್ಲಿ ಕಾನೂನು ತಂದು ಅದರಲ್ಲಿ ಒಂದು ಐನೂರು ಮನೆಗಳ ಆಸ್ತಿಯ ಮೇಲೆ ಮಿತಿ ಹಾಕುವುದಕ್ಕಾಗಿ ಇಂತಹ ಒಂದು ಕಾನೂನನ್ನು ತರುವುದಾದರೆ ಇದರಿಂದ ಖಂಡಿತ ಏನೂ ಪ್ರಯೋಜನವಾಗುವುದಿಲ್ಲ. ಇದನ್ನು ಬಿಟ್ಟು ನಮ್ಮ ರಾಜ್ಯಕ್ಕನುಗುಣವಾದಂತಹ ಒಂದು ಕಾನೂನನ್ನು ನಮ್ಮ ರಾಜ್ಯದಲ್ಲೇ ಮಾಡಿದ್ದರೆ ಇದರಿಂದ ಎಲ್ಲರಿಗೂ ಅನುಕೂಲವಾಗುತ್ತಿತ್ತು. ಇದು ಹೇಗಿದೆ ಎಂದರೆ ಈ ಭೂಸುಧಾರಣೆ ತರುತ್ತೇವೆಂದು ಬರೀ ಬಾಯಲ್ಲಿ ಹೇಳುತ್ತಿರುವಂತೆಯೇ ಬರೀ ಭೂಮಾಲೀಕರ ಅನುಕೂಲಕ್ಕಾಗಿ ತರುತ್ತಿರುವುದರಿಂದ ಮುಂದೆ ಕೇಂದ್ರ ಸರಕಾರ ತರುವಾಗ ಆ ಕಾನೂನು ಕೂಡ ಬರೀ ಬಂಡವಾಳಶಾಹಿಗಳ, ಹೋಟಲು ಹಾಗೂ ಸಿನಿಮಾ ಮಾಲೀಕರುಗಳ ಅನುಕೂಲಕ್ಕಾಗಿಯೇ ಎಂದು ತರುವುದರಿಂದ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ನಗರ ಆಸ್ತಿಗಳ ಮೇಲೆ ಐದು ಲಕ್ಷ ರೂಪಾಯಿ ಮಿತಿ ಎಂದು ಇಟ್ಟರೆ, ಇದರಂತೆಯೇ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಆಸ್ತಿಯ ಬಗ್ಗೆಯೂ ಐದು ಲಕ್ಷ ರೂಪಾಯಿ ಮಿತಿ ಎಂದು ಮಾಡಿದರೆ, ಇದರಿಂದ ರೈತರಿಗೆ ಬಹಳ ಅನ್ಯಾಯವಾಗುವುದಿಲ್ಲವೇ ?

ಶ್ರೀ ಸಿ. ಬೈರೇಗೌಡ.—ಅದು ಅವರ ಮಾತಿನಲ್ಲಿ ನ್ಯಾಯವಾಗಿರುತ್ತದೆ. ಸಮ್ಮ ಮಾತಿನಲ್ಲಿ ಅದು ಸಮಾಜವಾದವಾಗುವುದಿಲ್ಲ. ಇದು ನಿಮ್ಮ ಪಕ್ಷ ಹಾಗೂ ಆಡಳಿತ ಪಕ್ಷದವರು ಮಾಡಿರುವ ವಾದಗಳು. ನಾನು ಈಗ ಇದರ ವಿವಾದಗಳಿಗೆ ಹೋಗಲು ಇಷ್ಟ ಪಡುವುದಿಲ್ಲ. ಇದಕ್ಕಾಗಿ ನಾನು ಹೇಳುವುದು ಇಂತಹ ಒಂದು ಕಾನೂನನ್ನು ನಮ್ಮ ಸಭೆಯಲ್ಲಿ ತಂದು ಜಾರಿಗೆ ಕೊಟ್ಟರೆ ಆದರಂತೆ ನಮ್ಮ ರಾಜ್ಯದ ರೀತಿನೀತಿಗಳಿಗನುಗುಣವಾಗಿ ಅದನ್ನು ಅನುಸರಿಸಲು ಸಾಧ್ಯವಾಗುತ್ತದೆ. ಈ ಉದ್ದೇಶಗಳನ್ನು ಸಾಧನೆ ಮಾಡಲು ಅವಕಾಶ ಮಾಡದೆ ಇದರ ಎಲ್ಲ ಹೊಣೆಯನ್ನೂ ಕೇಂದ್ರಕ್ಕೆ ವಹಿಸಿಕೊಟ್ಟು ಅವರು ಕಾನೂನು ಮಾಡಬೇಕು ಎಂದು ಹೇಳಿದರೆ ಇದರಲ್ಲಿ ಏನು ಉಪಯೋಗವಾಗುತ್ತದೆ ? ಕೇಂದ್ರದವರು ಕಾನೂನು ಮಾಡುವಾಗ ಅವರಿಗೆ ಇಲ್ಲಿನ ಸ್ಥಿತಿಗತಿಗಳು ಚೆನ್ನಾಗಿ ಗೊತ್ತಿರುವುದಿಲ್ಲ, ಅವರು ಎರಡು ಲಕ್ಷವೋ ಇಲ್ಲವೇ ಐದು ಲಕ್ಷವೋ ಎಂದು ಮಿತಿ ತಂದು ಇಲ್ಲಿರುವ ದೊಡ್ಡ ದೊಡ್ಡ ಹೊಟೆಲು ಹಾಗೂ ಸಿನಿಮಾ ಮಾಲಿಕರಂಗಳಿಗೆ ವಿನಾಯತಿ ಪಡೆಯಲು ಅನುಕೂಲವಾಗುವಂತೆ ಮಾಡುತ್ತಿದ್ದಾರೆ. ಇಂತಹ ಒಂದು ಕಾನೂನನ್ನು ಮಾಡಲು ಕೇಂದ್ರ ಸರಕಾರಕ್ಕೆ ನಮ್ಮ ಸರಕಾರದವರು ಅವಕಾಶ ಕೊಡಬಾರದು. ಆದುದರಿಂದ ಇಲ್ಲಿ ತಂದಿರುವ ರೆಸಲ್ಯೂಷನ್ನನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶಕೊಟ್ಟುದಕ್ಕಾಗಿ ಅವರನ್ನೂ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀವಿಶ್ವನಾಥರೆಡ್ಡಿ (ಯಾದಗೀರ್).—ಮಾನ್ಯ ಅಧ್ಯಕ್ಷರೇ, ನಮ್ಮ ಸಭೆಯಲ್ಲಿ ಏನೊಂದು ನಿರ್ಣಯ ತಂದಿದ್ದಾರೆ ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿದೆ. ರಾಜ್ಯ ಸರಕಾರ ತನಗೆ ಇದ್ದಂತಹ ಅಧಿಕಾರವನ್ನು ಎಂದರೆ ಆಸ್ತಿಗಳ ಮೇಲೆ ಮಿತಿಯನ್ನು ಹಾಕುವುದು ಬಿಟ್ಟು ಈ ರೀತಿ ನಿರ್ಧಾರ ಮಾಡಿ ತನ್ನ ಅಧಿಕಾರವನ್ನು ಮೊಟಕು ಮಾಡುತ್ತದೆ ಎಂದು ಇಲ್ಲಿ ಕೇಳಬೇಕಾಗಿದೆ. ನಿಜವಾಗಿ ನೋಡಿದರೆ ಗ್ರಾಮಾಂತರ ಪ್ರದೇಶಗಳ ಜನರಿಗಿಂತ ನಗರಗಳವರ ಆಸ್ತಿ ಸಂಪತ್ತು ಹಾಗೂ ಉತ್ಪಾದನೆ ಸೌಕರ್ಯಗಳನ್ನು ಮಾಡಿಕೊಂಡು ಎಷ್ಟು ಸಂಪಾದನೆ ಮಾಡಿರುತ್ತಾನೋ ಅದರ ಮೇಲೆ ಆಸ್ತಿಗಳ ಮಿತಿಯನ್ನು ಹಾಕಬೇಕು, ಮತ್ತು ನಗರದ ಆಸ್ತಿಗಳ ಮಿತಿಗಳನ್ನು ಹಾಕುವಾಗ ಇಲ್ಲಿರುವ ನಿಜವಾದ ಸ್ಥಿತಿಗತಿಗಳನ್ನು ನೋಡಿಕೊಂಡು ಹಾಕಬೇಕೆಂದು ಎಲ್ಲಾ ರಾಜ್ಯಗಳಿಗೂ ಸೂಚನೆ ಕೊಡಬೇಕೆಂದು ಇದರಲ್ಲಿ ಹೇಳಲಾಗಿದೆ. ಇದರಲ್ಲಿರುವಂತೆ the problems relating thereto are common to all States, ಆದರೆ ನಮ್ಮ ರಾಜ್ಯಕ್ಕೆ ಇದ್ದ ಅಧಿಕಾರವನ್ನು ಮೊಟಕು ಮಾಡಿಕೊಂಡು ಇಂತಹ ಒಂದು ಕಾನೂನನ್ನು ಕೇಂದ್ರ ಸರಕಾರ ಮಾಡಬೇಕೆಂದು ಹೇಳತಕ್ಕ ಮಾತು ಅತ್ಯಂತ ಆಶ್ಚರ್ಯದಾಯಕವಾದ ಮಾತು, ಅಷ್ಟೇ ಅಲ್ಲ ಇದು ಬಹಳ ಶೋಚನೀಯವಾದ ವಿಷಯ. ಅಗ್ರಿಕಲ್‌ಚರಲ್ ಪ್ರಾಬ್ಲಂಸ್ ಎಲ್ಲ ಸ್ಟೇಟುಗಳಲ್ಲಿಯೂ ಕಾಮನ್ ಆಗಿರುವ ಪರಿಸ್ಥಿತಿ ಇಲ್ಲ. ಇದನ್ನು ಬಿಟ್ಟು ಕೇವಲ ನಗರ ಆಸ್ತಿಗಳ ಮೇಲೆ ಮಿತಿ ಹಾಕಬೇಕೆಂದು ಕೇಂದ್ರ ಸರಕಾರವನ್ನು ಒಪ್ಪಿಸಿರುವುದು ಕೇವಲ ಬಂಡವಾಳಶಾಹಿಗಳ ಆಸ್ತಿಗಳನ್ನುಳ್ಳವರ ಒತ್ತಾಯಕ್ಕಾಗಿ ಇಲ್ಲಿ ಕಾನೂನು ಮಾಡುತ್ತಾರೆ ಎನ್ನುವ ಭಾವನೆ ಬರುತ್ತದೆ, ಒಂದು ಪಕ್ಷ ಪಾರ್ಲಿಮೆಂಟು ನಮ್ಮ ರಾಜ್ಯದ ಪರಿಸ್ಥಿತಿಗನುಗುಣವಾಗಿ ಯಾವ ಮಿತಿಯನ್ನು ಹಾಕುತ್ತಾರೋ ಅದರಲ್ಲಿ ಹೆಚ್ಚು ಕಡಿಮೆ ಮಾಡಬೇಕಾದರೆ ನಮ್ಮ ರಾಜ್ಯಕ್ಕೆ ಅವಕಾಶವಿರುವುದಿಲ್ಲ. ಆಸ್ತಿ ಮಿತಿಗಳು ಎಲ್ಲ ಕಡೆಗಳಲ್ಲೂ ಒಂದೇ ರೀತಿಯಾಗಿರುತ್ತವೆಯೇ ? ಇದರಲ್ಲಿ ತಾರತಮ್ಯ ಮಾಡಲು ಸಾಧ್ಯವಿಲ್ಲ. ನಮ್ಮ ಕಾನೂನುಗಳನ್ನು ನಾವು ಮಾಡಿದರೆ ಅದನ್ನು ಇಲ್ಲಿಗೆ ಅನುಸರಿಸಿ ಮಾಡಿಕೊಳ್ಳಬಹುದಾಗಿತ್ತು, ನಮ್ಮಲ್ಲಿ ಲ್ಯಾಂಡು ಸೀಲಿಂಗು ತಂದ ಕಾಲದಲ್ಲೇ ಅರ್ಬನ್ ಸೀಲಿಂಗನ್ನೂ ತರಬಹುದಾಗಿತ್ತು. ಆದರೆ ನಮಗೆ ಇರುವ ಅಧಿಕಾರವನ್ನು ಮೊಟಕು ಮಾಡಿಕೊಂಡು ಇದನ್ನು ಪಾರ್ಲಿಮೆಂಟಿಗೆ ಕೊಡುವುದು ಸರಿಯಾದುದಲ್ಲ. ಒಂದು ಪಕ್ಷ ಪಾರ್ಲಿಮೆಂಟಿಗೆ ಈ ಅಧಿಕಾರವನ್ನು ಕೊಟ್ಟರೆ ಅವರಿಗೆ ಇಲ್ಲಿನ ಸ್ಥಿತಿಗತಿಗಳು ಸರಿಯಾಗಿ ತಿಳಿದಿರುವುದಿಲ್ಲ. ಇದರಲ್ಲಿ ಒಂದ ಕ್ಕೊಂದು ವ್ಯತ್ಯಾಸಗಳಾಗಿ ತಾರತಮ್ಯವಾಗುತ್ತದೆ. ಇದಕ್ಕಾಗಿ ನಾನು ಸಲಹೆ ಮಾಡುವುದು ನಮ್ಮ ಸರಕಾರ ಪಾರ್ಲಿಮೆಂಟಿಗೆ ಇಂತಹ ಕಾನೂನು ಮಾಡಲು ಅಧಿಕಾರ ಕೊಡುವುದು ಸರಿಯಲ್ಲ. ನಮ್ಮ ರಾಜ್ಯದಲ್ಲೇ ಭೂಮಿ ಸೀಲಿಂಗು ತರುವಂತೆ ಅರ್ಬನ್ ಸೀಲಿಂಗನ್ನೂ ತರಬಹುದು. ಇದಕ್ಕಾಗಿ ಇಲ್ಲಿ ತಂದಿರುವ ನಿರ್ಣಯವನ್ನು ನಾನು ವಿರೋಧಿಸಿ ನನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಅಧ್ಯಕ್ಷರೇ, ಸರಕಾರ ಇಂದು ಇಲ್ಲಿ ತಂದಿರುವ ರೆಸಲ್ಯೂಷನ್‌ನನ್ನು ನೋಡಿದರೆ ಇದು ಪ್ರಜಾಪ್ರಭುತ್ವಕ್ಕೆ ಏನೂ ಬೆಲೆ ಇಲ್ಲ ಎಂದು ಇಲ್ಲಿ. ದುಃಖದಿಂದ ಹೇಳುತ್ತೇನೆ. ಸೀಲಿಂಗು ಐದು ಲಕ್ಷ ಇರಲಿ ಇಲ್ಲವೇ ಎರಡು ಲಕ್ಷ ಇರಲಿ, ಇದನ್ನು ನೀವು ಹಾಗೂ

(ಶ್ರೀ ಎಸ್. ವೈ. ಪಾಟೀಲ್)

ಜಹತೆ ಪೇರಿ ನೀವು ಒಂದು ನಿರ್ಣಯವನ್ನು ಮಾಡಿರಿ. ಆದರೆ ಪ್ರಜಾಪ್ರಭುತ್ವದ ಪ್ರಕಾರ ಇಂದು ಜನ ನಮ್ಮನ್ನು ಆರಿಸಿಕೊಟ್ಟ ಕಾಲಕ್ಕೆ ನಮಗೆ ಅನುಕೂಲವಾದ ಕಾನೂನು ಮಾಡುವುದನ್ನು ಬಿಟ್ಟು ಈ ಅಧಿಕಾರವನ್ನು ಪಾರ್ಲಿಮೆಂಟಿಗೆ ಇಂತಹ ಅಧಿಕಾರವನ್ನು ಕೊಡುವುದು ಪ್ರಜಾಪ್ರಭುತ್ವದಲ್ಲಿ ಇದಕ್ಕಿಂತ ದುಃಖದಾಯಕವಾದ ಸಂಗತಿ ಇನ್ನೊಂದಿಲ್ಲ. ಇದೂ ಅಲ್ಲದೆ ನಮ್ಮ ರಾಜ್ಯದ ಇಪ್ಪತ್ತೈಳು ಮಂದಿ ಮಾತ್ರ ಪಾರ್ಲಿಮೆಂಟಿನಲ್ಲಿ ಸದಸ್ಯರಾಗಿರುತ್ತಾರೆ, ಆದರೆ ಪಾರ್ಲಿಮೆಂಟಿನವರು ಅವರಿಗೆ ಬಹುಮಂತ ಇದೆ ಅವರಿಗೆ ತೋರಿದ ರೀತಿಯಲ್ಲಿ ಕಾನೂನು ಮಾಡುತ್ತಾರೆ ಅದನ್ನು ಪಾಸು ಮಾಡುತ್ತಾರೆ. ತಾವು ಇಲ್ಲಿ ನಿಮಗಿರುವ ಅಧಿಕಾರವನ್ನು ಪಾರ್ಮೆಂಟಿಗೆ ಕೊಟ್ಟರೆ ಮುಂದೆ ಅವರು ಕಾನೂನು ಮಾಡಿ ಇಲ್ಲಿಗೆ ತಂದಾಗ ಅದರಲ್ಲಿ ಹೆಚ್ಚು ಕಡಿಮೆಯಾದರೆ ಅದನ್ನು ತಿದ್ದುಪಡಿ ಮಾಡಿ ಸರಿಯಾದ ವ್ಯವಸ್ಥೆ ಮಾಡಲು ಸಾಧ್ಯವಿಲ್ಲ. ಮತ್ತೆ ಪಾರ್ಲಿಮೆಂಟಿನವರೇ ಈ ಕಾಯಿದೆಯನ್ನು ತಿದ್ದು ಮಾಡಬೇಕಾಗಿ ಬರುತ್ತದೆ ನಮ್ಮ ರಾಜ್ಯವಲ್ಲಿ ಇದಕ್ಕೆ ಬೇಕಾದ ಅವೆಂಡಮೆಂಟನ್ನು ತರಲು ಸಾಧ್ಯವಾಗುವುದಿಲ್ಲ. ಇಂದು ನೀವು ೧೬೫ ಇಲ್ಲವೇ ೧೭೫ ಮಂದಿ ಇದ್ದೀವೆ ಹಾಗಾದರೂ ಈ ನಿರ್ಣಯ ಪಾಸು ಮಾಡುತ್ತೇವೆಂದು ಇದನ್ನು ಪಾಸು ಮಾಡಿಕೊಂಡರೆ ಅದರಿಂದ ಜನಕ್ಕೆ ಅನುಕೂಲವಾಗುವುದಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ಜನರಿಂದ ಆರಿಸಿ ಇಲ್ಲಿಗೆ ಬಂದಿರುವ ನಮ್ಮ ಸರಕಾರಕ್ಕೆ ಇಂತಹ ಕಾನೂನು ತರಲು ಶಕ್ತಿ ಇರಲಿಲ್ಲವೇ ? ಬುದ್ಧಿ ಇರಲಿಲ್ಲವೇ ? ಇದರಲ್ಲಿ ಸರಕಾರ ಒಂದು ದೊಡ್ಡ ತಪ್ಪು ಮಾಡಿದೆ, ಇದರಲ್ಲಿ ಸೀಲಿಂಗು ಐದು ಲಕ್ಷವೇ ಇರಲಿ, ಇಲ್ಲವೇ ಎರಡು ಲಕ್ಷವಿರಲಿ ಇಂತಹ ಒಂದು ಕಾಯಿದೆಯನ್ನು ಇಲ್ಲೇ ತಂದರೆ ಚೆನ್ನಾಗಿರುತ್ತಿತ್ತು. ಪಾರ್ಲಿಮೆಂಟಿಗೆ ಇಂತಹ ಒಂದು ಅಧಿಕಾರ ಕೊಡುವುದು ಸರಿಯಲ್ಲ. ಪಾರ್ಲಿಮೆಂಟಿನವರು ಇಲ್ಲಿಗೆ ತಂದ ಕಾಯಿದೆಯಲ್ಲಿ ಏನಾದರೂ ಲೋಪದೋಷಗಳು ಬಂದರೆ ಅದನ್ನು ಸರಿಮಾಡಲು ಮತ್ತೆ ಪಾರ್ಲಿಮೆಂಟಿಗೇ ಹೋಗಬೇಕಾಗುತ್ತದೆ ಮತ್ತು ನಾವು ಯಾರೂ ಇಲ್ಲಿ ಇದನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದುದರಿಂದ ಇಲ್ಲಿ ತಂದಿರುವ ರೆಸಲ್ಯೂಷವನ್ನು ನಾನು ಕಟುವಾಗಿ ವಿರೋಧಿಸುತ್ತೇನೆ.

12-30 P.M.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾವಂನಗರ).—ಮಾನ್ಯ ಅಧ್ಯಕ್ಷರೆ, ಹಂಚಿ ಉಂಡರೆ ಹಸಿವಿಲ್ಲ ಎನ್ನುವಂತೆ ಇರತಕ್ಕವರು ಇಲ್ಲದೆ ಇರುವವರಿಗೆ ಒಂದು ಭಾಗವನ್ನು ಕೊಟ್ಟು ಊಟ ಮಾಡಿದರೆ, ಬದುಕಿ ಬಾಳಿದರೆ ಅದರಲ್ಲಿ ನೆಮ್ಮದಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಮಾನ್ಯ ರೆವೆನ್ಯೂ ಸಚಿವರು ಈ ದಿವಸ ನಮ್ಮ ಮುಂದೆ ಈ ರಾಜ್ಯದ ಪಟ್ಟಣ ಪ್ರದೇಶಗಳಲ್ಲಿ ಆಸ್ತಿಯ ಮಿತಿಯನ್ನು ನಿರ್ಧರಿಸಲು ಲೋಕಸಭೆ ನಿರ್ಣಯ ಮಾಡಲಿ ಎನ್ನತಕ್ಕ ಠರಾವನ್ನು ನಮ್ಮ ಮುಂದೆ ಇಟ್ಟಿರತಕ್ಕದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಈಗಾಗಲೇ ಅವರು ಗ್ರಾಮಾಂತರ ಪ್ರದೇಶದಲ್ಲಿರುವ ರೈತರ ಆಸ್ತಿಯ ಮಿತಿ ಬಗ್ಗೆ ಒಂದು ಕರಡನ್ನು ತಯಾರುಮಾಡಿ ನಮ್ಮ ಮುಂದೆ ಒಂದು ಚರ್ಚೆಯಾಗಿ, ಅದೂ ಈಗಾಗಲೇ ಸೆಲೆಕ್ಟ್ ಕಮಿಟಿಗೆ ಹೋಗಿದೆ ಇಂಥ ಪರಿಸ್ಥಿತಿ ಈ ರಾಜ್ಯದಲ್ಲಿರುವಾಗ ರಾಜ್ಯದ ಜನತೆಯಿಂದ ಚುನಾಯಿತವಾದ ಈ ಶಾಸನ ಸಭೆ ಈ ರಾಜ್ಯದ ಗ್ರಾಮಾಂತರ ಮತ್ತು ಪಟ್ಟಣ ಆಸ್ತಿಯ ಮಿತಿಯನ್ನು ನಿರ್ಧರಿಸತಕ್ಕ ಅಭಿಪ್ರಾಯವನ್ನು ಕೊಡುವುದಕ್ಕೆ ಶಕ್ತವಾಗಿದೆ ಎಂದು ತಿಳಿದುಕೊಂಡಿರುವವರ ಪೈಕಿ ನಾನೂ ಒಬ್ಬ. ಪ್ರಾಯಶಃ ದುರದೃಷ್ಟವಶಾತ್ ಕೇಂದ್ರ ಸರ್ಕಾರದವರು ಹಾಗೂ ಪಾರ್ಲಿಮೆಂಟ್ ನಗರ ಆಸ್ತಿಯ ಮಿತಿ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿ ಎನ್ನುವಂಥ ಬಹಳ ಶಂಕೆಗೆ ಒಳಗಾಗಿರತಕ್ಕ ಒಂದು ನಿರ್ಣಯ ಇದಾಗುತ್ತದೆ ಎಂದು ತಮ್ಮ ಮುಖಾಂತರ ನಾನು ಮಾನ್ಯ ರೆವೆನ್ಯೂ ಸಚಿವರಿಗೆ ಅರಿಕೆ ಮಾಡುತ್ತೇನೆ.

ಈ ವ್ಯವಸ್ಥೆಯಲ್ಲಿ ಏನೇ ಆಸ್ತಿ ಮಿತಿ ಇಡಲಿ, ಗ್ರಾಮಾಂತರ ಮತ್ತು ಪಟ್ಟಣ ಎರಡನ್ನೂ ಒಂದೇ ದೃಷ್ಟಿಯಿಂದ ನೋಡತಕ್ಕದ್ದು ನ್ಯಾಯ, ಅನಿವಾರ್ಯ ಮತ್ತು ಧರ್ಮ. ಗ್ರಾಮಾಂತರದಲ್ಲಿ ೧೦ ಎಕರೆಯ ಮಿತಿಯನ್ನು ಇಡಬೇಕು ಎಂದು ಹೇಳತಕ್ಕ ಈ ಸಂಬಂಧದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನಗರ ಆಸ್ತಿಯ ಬಗ್ಗೆ ಎರಡು ಮಾತನ್ನು ಆಡಿದ್ದಾರೆ. ಒಂದು ಸಾರಿ ಎರಡು ಲಕ್ಷ ಪಟ್ಟಣದಲ್ಲಿ ಆಸ್ತಿಯ ಮಿತಿ ಇರಬೇಕು, ಮತ್ತೊಂದು ಸಂದರ್ಭದಲ್ಲಿ ಮೂರು ಲಕ್ಷ ಇರಬೇಕು, ಮಗದೊಂದು ಸಂದರ್ಭದಲ್ಲಿ ೫ ಲಕ್ಷ ಇರಬೇಕೆಂದೂ ಹೇಳಿದ್ದಾರೆ. ನಿಗದಿ ಇಲ್ಲದೆ ಇರತಕ್ಕ ಮಾತನ್ನು ಆಡತಕ್ಕ ಸರ್ಕಾರದ ಸೂತ್ರಧಾರಿಗಳು ಈ ರಾಜಕೀಯದಲ್ಲಿರುವಾಗ ಹೇಗೆ ಈ ರಾಜ್ಯದಲ್ಲಿ ಆಡಳಿತ ನಡೆದುಕೊಂಡು ಹೋಗಬೇಕು ಎನ್ನುವುದರ

ಬಗ್ಗೆ ನಮಗೆ ತುಂಬ ಶಂಕೆ ಬರುತ್ತದೆ. ಆದುದರಿಂದ ನಾವು ಭಕ್ತಿಪೂರ್ವಕವಾಗಿ ತಮ್ಮ ಮುಖಾಂತರ ಸರ್ಕಾರವನ್ನು ಪ್ರಾರ್ಥನೆ ಮಾಡುವುದೇನೆಂದರೆ ನಗರ ಮತ್ತು ಗ್ರಾಮಾಂತರಗಳಲ್ಲಿನ ಮಿತಿಯನ್ನು ಈ ಸಭೆ ಏಕಕಾಲದಲ್ಲಿ ನಿರ್ಣಯಿಸುವುದು ಉಚಿತ ಮತ್ತು ಗೌರವ. ಸರ್ಕಾರ ಜಮೀನು ಇಲ್ಲದವರಿಗೆ ಜಮೀನನ್ನು ಕೊಡುತ್ತದೆ, ಉದ್ಯೋಗವಿಲ್ಲದವರಿಗೆ ಉದ್ಯೋಗ ಕೊಡುತ್ತದೆ, ಪಟ್ಟಣಗಳಲ್ಲಿನ ಆಸ್ತಿಯ ಮೇಲೆ ಮಿತಿಯನ್ನು ತಂದು ಉಳಿದವರನ್ನು ನಮಗೆಲ್ಲ ಹಂಚುತ್ತದೆ ಎಂದು ಜನ ತಿಳಿದಿದ್ದಾರೆ. ಈ ಕಡೆ ದೃಷ್ಟಿ ಹೋದರೆ ಈ ದೇಶದಲ್ಲಿ ಭೂಮಿಯ ಮೇಲೆ, ಕಾರ್ಖಾನೆಯಲ್ಲಿ ನಿಂತು ಕೆಲಸ ಮಾಡತಕ್ಕವರ ಶಕ್ತಿಯನ್ನು ಬೇರೆ ಕಡೆ ಸೆಳೆಸಿದ ಹಾಗೆ ಆಗಿದೆ. ಈ ದೇಶದಲ್ಲಿ ಇದರಿಂದ ಸ್ವಾಭಾವಿಕವಾಗಿ ಉತ್ಪಾದನೆ ಕುಂಠಿತವಾಗಿದೆ ಎಂದು ತಿಳಿದು ಕೊಂಡಿರುವವರ ಪೈಕಿ ನಾನೂ ಒಬ್ಬ. ಮಾನ್ಯ ರೆವೆನ್ಯೂ ಸಚಿವರಲ್ಲಿ ತಮ್ಮ ಮೂಲಕ ನನ್ನ ಪ್ರಾರ್ಥನೆ ಏನೆಂದರೆ. ಗ್ರಾಮಾಂತರ ಮತ್ತು ನಗರ ಆಸ್ತಿಗಳಿಗೆ ಸಂಬಂಧಪಟ್ಟ ಹಾಗೆ ಮಿತಿಯನ್ನು ಏಕಕಾಲದಲ್ಲಿ ತಂದು, ಅವರ ಹೆಸರನ್ನು ಈ ವೈಶಾಖ ರಾಜ್ಯದ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ಹೃತೂರ್ವಕವಾಗಿ ವಂದಿಸಿ ನನ್ನ ಮಾತನು ಮುಗಿಸುತ್ತೇನೆ.

†ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ. ಸಭೆಯ ಮಾನ್ಯ ಸದಸ್ಯರು ನಿರ್ಣಯದ ವಿಷಯದಲ್ಲಿ ಬಹಳ ಮೇಲ್ಮಟ್ಟದ ಚರ್ಚೆ ಮಾಡಿ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರೆಲ್ಲರನ್ನೂ ಬಹಳ ಕೃತಜ್ಞತೆಯಿಂದ ವಂದಿಸುತ್ತೇನೆ. ಮೂಲಭೂತವಾಗಿ ಅಥವಾ ಸೈದ್ಧಾಂತಿಕವಾಗಿ ನಾವು ಮಾತನಾಡಬೇಕಾದರೆ ಎಲ್ಲ ಸಂಪನ್ಮೂಲಗಳೂ ಕೂಡ ಸಮಾಜದ ಆಸ್ತಿಯಾಗಿರಬೇಕು, ಸಮಾಜ ಅದರ ಪ್ರಯೋಜನವನ್ನು ಎಲ್ಲ ಜನಕ್ಕೂ ದೊರಕಿಸಿ ಕೊಡತಕ್ಕದ್ದಾಗಿರಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ನಾವು ಎಷ್ಟೇ ಈ ಸಿದ್ಧಾಂತದ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ ಎಂದು ಹೇಳಿದರೂ ಇದನ್ನು ಕಾರ್ಯರೂಪಕ್ಕೆ ತರುವಾಗ ರಾಜಕೀಯ ಪಕ್ಷಗಳಲ್ಲಿ, ಹಾಗೂ ಪಕ್ಷಗಳ ಒಳಗೆ ಬೇರೆ ಬೇರೆ ಯೋಚನೆ ಮಾಡುವುದು ಸ್ವಾಭಾವಿಕ. ಏಕೆಂದರೆ ಮನುಷ್ಯನಿಗೆ ಆಸ್ತಿಯ ಮೇಲೆ ಇರತಕ್ಕ ಅಭಿಮಾನ ಜಾಸ್ತಿಯೇ ಹೊರತು ಸೈದ್ಧಾಂತಿಕವಾಗಿ ಯೋಚನೆ ಮಾಡುವುದು ಸ್ವಲ್ಪ ಕಡಿಮೆ ಎಂದು ನನ್ನ ಭಾವನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದೇ ಸಮಯಕ್ಕೆ ತಕ್ಕ ಸಿದ್ಧಾಂತ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭಾಷಣ ಮಾಡುವುದಕ್ಕೂ ಕಾರ್ಯತಃ ಮಾಡುವುದಕ್ಕೂ ವ್ಯತ್ಯಾಸವಿದೆ. ಆದುದರಿಂದ ಇಲ್ಲಿ ಭಾಷಣ ಮಾಡುವುದು ಎಷ್ಟೇ ಬಹಳ ಹಿತವಾಗಿ, ಚೆನ್ನಾಗಿ ಕಾಣುವ ರೀತಿಯಿಂದ ಇದ್ದರೂ ಕೂಡ ಕಾರ್ಯಗತ ಮಾಡುವಾಗ ಭಿನ್ನಾಭಿಪ್ರಾಯಗಳು ಒಂದೇ ಬರುತ್ತವೆ. ಆ ದೃಷ್ಟಿಯಿಂದ ನಾನು ಹೇಳಂವುದು ಇಷ್ಟೆ. ಮೂಲಭೂತವಾದ ಸಿದ್ಧಾಂತದ ವಿಷಯದಲ್ಲಿ ನನಗಂತೂ ಪೂರ್ಣ ನಂಬಿಕೆ ಇದೆ. ನಾವೆಲ್ಲರೂ ಒಂದೊಂದು ರಾಜಕೀಯ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮ ರಾಜಕೀಯ ಪಕ್ಷಕ್ಕಂತೂ ಈ ಸಿದ್ಧಾಂತವನ್ನು ತಲುಪುವುದಕ್ಕೆ ಸಾಕಷ್ಟು ಪ್ರಯತ್ನವನ್ನು ಮಾಡ ಬೇಕು ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆ ರೀತಿ ಸಂಶಯವಿಟ್ಟುಕೊಳ್ಳಬಾರದು ಎಂದೂ ನಾನು ಮಾನ್ಯ ಸದಸ್ಯರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಇದನ್ನು ಬಿಟ್ಟರೆ ರಾಜಕೀಯ ಪಕ್ಷಗಳ ಮಟ್ಟಕ್ಕೆ ಬಂದರೆ ರಾಜಕೀಯ ಪಕ್ಷಗಳಲ್ಲಿ ಕೂಡ ಭಿನ್ನಾಭಿಪ್ರಾಯವಿದೆ. ಒಂದು ಪಕ್ಷದಲ್ಲಿ ಒಳಗೊಳಗೇ ಭಿನ್ನಾಭಿಪ್ರಾಯಗಳಿರುವುದು ಸ್ವಾಭಾವಿಕ. ಇಂಥ ಬಹಳ ಮೂಲಭೂತವಾದ ಈ ಸಮಸ್ಯೆಯನ್ನು ಯಾವರೀತಿ ಪರಿಹಾರ ಮಾಡಹೇಕೆಂದು ಇಡೀ ದೇಶದಲ್ಲಿ ಮಾತ್ರವಲ್ಲ. ಪ್ರಪಂಚದಲ್ಲಿ ಈ ಮೂಲಭೂತವಾದ ಸಮಸ್ಯೆಯನ್ನು ಯಾವರೀತಿ ಬಗೆಹರಿಸಬೇಕು, ಸರಿ ಸಮಾನವಾಗಿ ಎಲ್ಲರಿಗೂ ಅದರ ಪ್ರಯೋಜನ ಸಿಕ್ಕುವ ಹಾಗೆ ಮಾಡಬೇಕಾದರೆ ಯಾವ ತರಹ ಕಾರ್ಯ ಸಾಧನೆ ಮಾಡಬೇಕು ಎನ್ನುವುದು ಪ್ರಪಂಚವನ್ನೇ ಪ್ರಶ್ನೆ ಮಾಡತಕ್ಕ ಬಹಳ ದೊಡ್ಡ ವಿಷಯ. ಈ ವಿಷಯದಲ್ಲಿ ನಾವು ಪಟ್ಟಣ ಆಸ್ತಿ ಹೇಗಿರಬೇಕು, ಭೂಮಿ ಬಗ್ಗೆ ಯಾವ ರೀತಿ ನಾವು ವ್ಯವಸ್ಥೆ ಮಾಡ ಬೇಕು, ಉತ್ಪತ್ತಿ ಮೇಲೆ ಯಾವ ರೀತಿ ಮಿತಿ ಹಾಕಬೇಕು. ಖರ್ಚಿನ ಮೇಲೆ ಯಾವ ರೀತಿ ಮಿತಿ ಹಾಕ ಬೇಕು, ಇಂಥ ಅನೇಕ ವಿಷಯಗಳು ನಮ್ಮನ್ನು ಈಗ ಕಾಡುತ್ತಿರುವ ವಿಷಯಗಳಾಗಿವೆ. ನಾವು ಮೊಟ್ಟ ಮೊದಲು ಭೂಮಿಗೆ ಕೈ ಹಾಕಿದ್ದೇವೆ. ಭೂಮಿಯಲ್ಲಿ ಮಿತಿ ಎಷ್ಟು ಇರಬೇಕು, ಮಿತಿ ಹಾಕಂವುದಂ ಸೂಕ್ತವೇ ಅಲ್ಲವೇ ಎನ್ನುವುದೂ ಮೂಲಭೂತವಾದ ಪ್ರಶ್ನೆ. ಈ ಪ್ರಶ್ನೆಗೆ ವಿರೋಧವಾಗಿ ಇರುವವರೂ ಇದ್ದಾರೆ. ಇದಕ್ಕೆ ಕೈ ಹಾಕಬಾರದು. ಎಷ್ಟು ಸಂಪಾದನೆ ಮಾಡುವುದಕ್ಕೆ ಶಕ್ತಿ ಇದೆಯೋ ಅಷ್ಟನ್ನೂ ಸಂಪಾದನೆ ಮಾಡಿ, ಅದನ್ನು ಅವರಂ ಅನುಭವಿಸುವುದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವಿರಬೇಕು ಎಂದು ಹೇಳುವವರೂ ಇದಾ ರೆ. ಮೂಲಭೂತವಾದ ಹಕ್ಕು ಎಂದು ಹೇಳುವವರೂ ಇದ್ದಾರೆ. ನಾನು ಅದ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ನ್ನೆಲ್ಲ ವಿಮರ್ಷೆ ಮಾಡುವುದಕ್ಕೆ ಹೋಗುವುದಿಲ್ಲ. ಭೂಮಿಯ ಮಿತಿಯ ಮೇಲೆ ಈಗಾಗಲೇ ಒಂದು ಕಾನೂನನ್ನು ಮಾಡುವ ಉದ್ದೇಶದಿಂದ ಮಸೂದಾ ಕಾನೂನು ತಂದು ಈ ಸಭೆಯಲ್ಲಿ ಚರ್ಚೆಯಾಗಿ ಅದನ್ನು ಒಂದು ಸೆಲೆಕ್ಟ್ ಸಮಿತಿಗೆ ನಾವು ಕಳುಹಿಸಿದ್ದೇವೆ. ಅದಕ್ಕೂ ಇದಕ್ಕೂ ಹೋಲಿಕೆ ಮಾಡುವುದು ಸ್ವಾಭಾವಿಕವಾಗಿ ಬರುತ್ತದೆ. ಈಗತಾನೇ ಶ್ರೀ ಬಿ. ಪುಟ್ಟಸ್ವಾಮಯ್ಯನವರೂ, ಇನ್ನೂ ಕೆಲವು ಮಾನ್ಯ ಸದಸ್ಯರೂ ಆಸ್ತಿಯ ಬೆಲೆಯನ್ನಾಗಲೀ ಅದರಿಂದ ಬರುವ ಉತ್ಪತ್ತಿಯನ್ನಾಗಲೀ ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಡವೇ ಎಂದು ಪ್ರಶ್ನೆ ಮಾಡುತ್ತಿದ್ದರು. ಒಂದು ದೃಷ್ಟಿಯಿಂದ ನೋಡಿದರೆ ಬೆಲೆಗಿಂತ ಹೆಚ್ಚು ಉತ್ಪನ್ನದ ಕಡೆಗೆ ಸ್ವಲ್ಪ ಗಮನ ಕೊಡುವುದು ಅವಶ್ಯಕ ಎನ್ನುವುದನ್ನು ಒಂದೊಂದು ವೇಳೆ ಒಪ್ಪುವ ಹಾಗೆ ಆಗುತ್ತದೆ. ಆದರೆ ಪೂರ್ಣವಾಗಿ, ನಿರ್ದಿಷ್ಟವಾಗಿ ಇಷ್ಟೇ ಉತ್ಪತ್ತಿ, ಅದಕ್ಕಿಂತ ಹೆಚ್ಚು ಯಾರಿಗೂ ಇರಬಾರದು ಎನ್ನುವ ತತ್ವವನ್ನು ನಾವು ಒಪ್ಪಿಕೊಂಡರೂ ಕೂಡ ಅದನ್ನು ಕಾರ್ಯತಃ ತರುವುದು ಸ್ವಲ್ಪ ಕಷ್ಟ. ಈ ಪಟ್ಟಣದ ಆಸ್ತಿ ವಿಷಯದಲ್ಲಿ ಮಿತಿ ಹಾಕುವಾಗ ಮಾನ್ಯ ಸದಸ್ಯರು ಇರತಕ್ಕಂಥಾ ತೊಂದರೆಗಳನ್ನು ಸಲಹೆ ಮಾಡುತ್ತಾ ಹೇಳಿದರು. ನಾವೇ ಈ ಮಸೂದೆಯನ್ನು ರಚಿಸಿ ಈ ಸಭೆಯ ಮುಂದೆ ತರಬೇಕು ಎನ್ನುವ ಆಸೆ ಏನೋ ಇತ್ತು. ಇದು ಈ ರೀತಿ ಆಗುವುದಕ್ಕೆ ಕಾರಣ ಏನು ಎಂದರೆ ರಾಜಕೀಯ ಪಕ್ಷಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಇದರ ಮಿತಿ ಎಷ್ಟೆಂಬುದರ ಅರಿವು ಇರಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಕೇಂದ್ರ ಸರ್ಕಾರ ಹಾಗು, ರಾಜ್ಯ ಸರ್ಕಾರದಲ್ಲಿ ಒಂದೇ ಪಕ್ಷ ಆಡಳಿತ ನಡೆಸುವಾಗ ಇದರ ಬಗ್ಗೆ ಭಿನ್ನಾಭಿಪ್ರಾಯಗಳು ಏತಕ್ಕೆ ಇರಬೇಕು?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಶ್ರೀಮಾನ್ ಎಂ. ಎಸ್. ಕೃಷ್ಣನ್ ರವರು ಹೇಳಿದರು. ಈ ರಾಜಕೀಯ ಪಕ್ಷಗಳಲ್ಲಿ ಭಿನ್ನಾಭಿಪ್ರಾಯಗಳು ಏತಕ್ಕೆ ಇರಬೇಕು ? ಕೇಂದ್ರದಲ್ಲೂ ಒಂದೇ ಪಕ್ಷ ಇರುವಾಗ ಅವರು ಹೇಳಿದುತೆ ಏತಕ್ಕೆ ಮಾಡಬೇಕು? ನೀವೇ ಏತಕ್ಕೆ ಈ ಕೆಲಸವನ್ನು ಮಾಡಬಾರದು ಎಂದು ಹೇಳಿದರು. ಅನೇಕ ವೇಳೆ ಈ ರೀತಿ ಭಿನ್ನಾಭಿಪ್ರಾಯಗಳು, ವ್ಯತ್ಯಾಸಗಳು ಬರುವುದು ನಮ್ಮ ಕಾಂಗ್ರೇಸ್ ಪಕ್ಷಕ್ಕೇನೇ ಮೀಸಲಾಗಿ ಬಂದಿದೆ ಅಂತಲ್ಲ, ನಮ್ಮ ದೇಶದಲ್ಲಿ ಅನೇಕ ರಾಜಕೀಯ ಪಕ್ಷಗಳು ೨-೩ ಚೂರು ಆಗಿರುವುದನ್ನು ನಾವು ನೋಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದಲ್ಲಿ ನಾನು ಹೇಳುವುದು ಏನೆಂದರೆ ನಿಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲದೇ ಇರುವುದರಿಂದ ನೀವೇ ತೀರ್ಮಾನ ಮಾಡಿ ಈ ಬಗ್ಗೆ ಒಂದು ಪ್ರಗತಿಪರವಾದ ಬಿಲ್ಲನ್ನು ತರದೇ ಮೇಲಿನವರು ತರುವ ಹಾಗೆ ಮಾಡಿದ್ದೀರಲ್ಲಾ ಎಂದು.

ಶ್ರೀ ಹೆಚ್. ಎಸ್. ಸಿದ್ಧಪ್ಪ,—ಅವರಲ್ಲಿ ಭಿದ್ರಾಭಿಪ್ರಾಯ ಬಂದು ಪಕ್ಷ ಒಡೆದರೆ...

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ರಾಜಕೀಯ ಪಕ್ಷಗಳೇ ಅಧಿಕಾರದಲ್ಲಿರಲಿ ಅವರು ಒಗ್ಗಟ್ಟಿನಲ್ಲಿ ಕೆಲಸ ಮಾಡಬೇಕೆಂದು ಮಾಡುತ್ತಾರೆ. ''ನೀವು ನಾವು ಅಧಿಕಾರದಲ್ಲಿರಬೇಕು'' ಎಂದು ಕಾಯುತ್ತಿದ್ದೀರಿ. ನಾವು ಒಗ್ಗಟ್ಟು ಇಟ್ಟುಕೊಂಡು ಕೆಲಸ ಮಾಡಬೇಕೆಂದು ಹೂಡುತ್ತೇವೆ. ಆದರೆ ಯಾವುದೇ ರಾಜಕೀಯ ಪಕ್ಷಗಳೂ ಕೂಡ ಒಡೆದು ಅಧಿಕಾರ ತೆಗದುಕೊಳ್ಳಬೇಕು ಎಂದು ಹೇಳುವುದಿಲ್ಲ. ಆ ರೀತಿ ಎದುರು ಪಕ್ಷದವರು ಕೂಡ ಯೋಚನೆ ಮಾಡುವುದಿಲ್ಲ. ಆದರಲ್ಲಿ ಯಾರಿಗೂ ಭಿನ್ನಾಭಿಪ್ರಾಯ ಇಲ್ಲ ಎಂದು ಹೇಳುತ್ತೇನೆ.

ಈ ರಾಜಕೀಯ ಪಕ್ಷದಲ್ಲಿ ಕೆಲಸಮಾಡುವಾಗ ಎಷ್ಟೋ ವೇಳೆ ಮಿತಿ ನಮ್ಮ ಮೇಲೆ ಹಾಕಿಕೊಳ್ಳುವುದು ಅವಶ್ಯಕವಾಗಿರುತ್ತದೆ, ಅನಿವಾರ್ಯವಾಗಿರುತ್ತದೆ; ಈ ರೀತಿಯ ಒಂದು ಸಂದರ್ಭ ಇದೆ ಎಂದು ಹೇಳಿದರು. ತಾವು ಇದನ್ನು ಸ್ವಲ್ಪಮಟ್ಟಿಗೆ ಒಪ್ಪಬೇಕು. ರಾಜಕೀಯ ಪಕ್ಷಗಳು ಕೆಲಸ ಮಾಡುವಾಗ ನಮ್ಮ ಮೇಲೆ ನಾವು ಮಿತಿ ಹಾಕಿಕೊಳ್ಳುವಂಥ ಪ್ರಸಂಗ ಅನಿವಾರ್ಯವಾಗಿ ಬರಬಹುದು ಎಂದು ಹೇಳಿದ್ದಾರೆ. ಅದಕ್ಕೆಂದ ಹೆಚ್ಚಾಗಿ ಈ ನಿರ್ಣಯದಲ್ಲಿರತಕ್ಕಂಥ ಮುಖ್ಯವಾದ ಅಂಶದ ಕಡೆಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸದಸ್ಯರೊಬ್ಬರು ಕೇಳಿದರು. ಈ ಪಟ್ಟಣದ ಆಸ್ತಿ ಯಾವುಯಾವುದರ ಮೇಲೆ ಇದೆಯೋ ಅದೇರೀತಿ ಒಡವೆಗಳ ಮೇಲೆ, ಹಣದ ಮೇಲೆ, ಬ್ಯಾಂಕುಗಳಲ್ಲಿ ಇಟ್ಟಿರತಕ್ಕಂಥ ದುಡ್ಡಿನ ಮೇಲೆ ಏತಕ್ಕೆ ಬರುವುದಿಲ್ಲ ಎಂದು. ಆದರೆ ಈ ನಿರ್ಣಯದಲ್ಲಿರತಕ್ಕಂಥಾದ್ದು Land and Buildings including rights therein. ಭೂಮಿ, ಮನೆಗಳು, ಅದರ ಹಕ್ಕದಲ್ಲಿರತಕ್ಕಂಥ

ಅಲ್ಪಸ್ವಲ್ಪ ಜಮೀನುಗಳು ಖಾಲಿ ಜಮೀನುಗಳು ಇಂಥವುಗಳ ಮೇಲೆ ಇದೆಯೇ ಹೊರತು ಬೇರೆ ಯಾವುದರ ಮೇಲೂ ಇಲ್ಲ ಇದಕ್ಕೆ ಇಷ್ಟೆ ಮಿತಿ. ಈವೊತ್ತಿನ ದಿವಸ ನಮ್ಮ ರಾಜ್ಯದ ಅನೇಕ ಪಟ್ಟಣಗಳಲ್ಲಿ ಬೇರೆ ಬೇರೆ ವಿಧವಾದ ಬೆಲೆ ಇರುವುದು ನಮ್ಮ ಕಣ್ಣಿಗೆ ಕಾಣುತ್ತಾ ಇದೆ. ಒಂದೇ ಪಟ್ಟಣದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ಮನೆಗೆ ಹೆಚ್ಚು ಕಡಿಮೆ ಇರುವುದು ಗೊತ್ತಿದೆ. ಈ ಮಿತಿಯನ್ನು ಹಾಕುವಾಗ ಈಗ ಇರತಕ್ಕಂಥ ಕಷ್ಟದಲ್ಲಿ ಇದೂ ಒಂದು. ಈ ರೀತಿ ಇರುವುದರಿಂದ ಇದನ್ನು ಬೆಲೆ ಮೇಲೆ ಮಿತಿ ಹಾಕಬೇಕೆ, ಅಥವಾ ವಿಸ್ತೀರ್ಣದ ಮೇಲೆ ಮಿತಿ ಹಾಕಬೇಕು ಯಾವ ರೀತಿ ಹಾಕಬೇಕೆಂಬುದು ಸ್ವಲ್ಪ ಕಷ್ಟದ ಕೆಲಸ. ಇದರ ಜೊತೆಗೆ ಬೆಂಗಳೂರಿನಲ್ಲಿರತಕ್ಕಂಥಾವನು ಅಥವಾ ಮೈಸೂರು ರಾಜ್ಯದಲ್ಲಿ ಒಂದೆ ಪಟ್ಟಣದಲ್ಲಿ ವಾಸ ಮಾಡತಕ್ಕಂಥಾವನು ಬಾಂಬೆಯಲ್ಲಿ ಮದ್ರಾಸ್‌ನಲ್ಲಿ, ಕಲ್ಕತ್ತಾದಲ್ಲಿ ಈ ರೀತಿ ಬೇರೆ ಬೇರೆ ಪಟ್ಟಣಗಳಲ್ಲಿ ಆಸ್ತಿಯನ್ನು ಇಟ್ಟುಕೊಂಡಿದ್ದರೆ ಅದರ ಮೇಲೆ ಈ ಮಿತಿಯನ್ನು ಹಾಕತಕ್ಕಂಥ ಸಂದರ್ಭ ಬಂದಾಗ ಆ ಆಸ್ತಿಯನ್ನು ನಾವು ಒಳಪಡಿಸುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಅದರ ಮೇಲೆ ನಮ್ಮ ಹತೋಟಿ ಏನೂ ಇರುವುದಿಲ್ಲ. ಇಂತಹ ಒಂದು ಪರಿಸ್ಥಿತಿಯೂ ಕೂಡ ಉಂಟಾಗುತ್ತದೆ. ಇದನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡರೆ ರಾಜ್ಯ ಸರ್ಕಾರದ ಮಟ್ಟಕ್ಕಿಂತ ಕೇಂದ್ರ ಸರ್ಕಾರದವರು ಈ ಬಗ್ಗೆ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸಿ ಪಟ್ಟಣಗಳಲ್ಲಿರುವ ಎಲ್ಲಾ ಆಸ್ತಿಗಳ ಮೇಲೆ ಒಂದು ಮಿತಿ ತರುವುದಕ್ಕೆ ಕೇಂದ್ರ ಸರ್ಕಾರ ಶಾಸನ ಮಾಡಿದರೆ ಸೂಕ್ತ, ಅಲ್ಲದೆ ಅವೆಲ್ಲವನ್ನೂ ಒಳಪಡಿಸುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಯೋಚನೆ ಮಾಡಬೇಕು ಎಂದು ಈ ಮಾನ್ಯ ಸಭೆಗೆ ತಿಳಿಸಲು ಇಚ್ಛೆ ಪಡುತ್ತೇನೆ. ಬೆಂಗಳೂರಿನಲ್ಲಿರತಕ್ಕಂಥವರು ಯಾರೋ ಒಬ್ಬರು ನನ್ನ ಸ್ನೇಹಿತರು ಹೇಳಿದರು. ಮೈಸೂರು ರಾಜ್ಯದಲ್ಲಿ ಪಟ್ಟಣದಲ್ಲಿ ವಾಸಮಾಡತಕ್ಕಂಥಾವರು ಬಾಂಬೆಯಲ್ಲಿ ಆಸ್ತಿಮಾಡಿಕೊಂಡು ಪ್ರತಿ ತಿಂಗಳು ೫-೬ ಸಾವಿರ ರೂಪಾಯಿ ವರಮಾನ ಬರುವ ಹಾಗೆ ಮಾಡಿಕೊಂಡಂಥಾವರು ಕೆಲವರು ಜನ ಇದ್ದಾರೆ ಎಂದು. ಹೀಗೆ ರಾಜ್ಯದ ಹೊರಗಡೆ ಪಟ್ಟಣದಲ್ಲಿ ಆಸ್ತಿ ಇಟ್ಟುಕೊಂಡಂಥವರಿಗೆ ನಾವು ಮಿತಿಯನ್ನು ಹಾಕುವ ಬಗ್ಗೆ ಶಾಸನ ಮಾಡುವುದು ಕಷ್ಟ. ಆ ದೃಷ್ಟಿಯಿಂದ ಕೇಂದ್ರ ಸರ್ಕಾರವೇ ಈ ತತ್ವಕ್ಕೆ ಕಟ್ಟುಬಿದ್ದಿರುದರಿಂದ, ಒಂದೇ ಸರ್ಕಾರ ಇರುವುದರಿಂದ ಅವರೇ ವಿಶೇಷ ಗಮನ ಇಟ್ಟು ಕೆಲಸ ಮಾಡುವುದು ಸೂಕ್ತ, ಅಲ್ಲದೆ ಎಲ್ಲರನ್ನೂ ಅವರು ಮಿತಿಗೆ ಒಡಿಪಡಿಸುವುದು ಸಾಧ್ಯ ಎಂದು ಈ ನಿರ್ಣಯವನ್ನು ಈ ಸಭೆಯ ಪರವಾಗಿ ತಂದಿದ್ದೇನೆ.

ಇನ್ನು ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಇದರಲ್ಲಿ ಇನ್ನು ಹೆಚ್ಚಾಗಿ ಹೇಳುವುದು ಏನೂ ಇಲ್ಲ. ಇದರಲ್ಲಿ ಬಹಳ ಮುಖ್ಯವಾದ ಅಂಶ ಏನೆಂದರೆ ಇದಕ್ಕೆ ಪರಿಹಾರವನ್ನು ಕೊಡುವ ವಿಷಯದಲ್ಲಿ ಹೇಳಬೇಕಾದರೆ ರಾಜ್ಯ ಸರ್ಕಾರದ ಮಟ್ಟದಲ್ಲಿ ಇದಕ್ಕೆ ಒಂದು ಏಕರೂಪತೆಯನ್ನು ಕಲ್ಪಿಸುವುದು ನಮಗೆ ಕಷ್ಟ; ಎಂದು ನನ್ನ ಭಾವನೆ. ಈ ದೃಷ್ಟಿಯನ್ನಿಟ್ಟುಕೊಂಡು ಈ ನಿರ್ಣಯವನ್ನು ಈ ಸಭೆಯ ಮುಂದೆ ತಂದಿದ್ದೇನೆ. ಕೇಂದ್ರ ಸರ್ಕಾರದವರಿಗೆ ಈ ಅಧಿಕಾರವನ್ನು ವಹಿಸಿ ಕೊಡುವುದಕ್ಕೆ ಎಲ್ಲರೂ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ನಮ್ಮ ಹಕ್ಕನ್ನು ಕಳೆದುಕೊಂಡಂತೆ ಆಗುವುದಿಲ್ಲವೇ ಎಂದು ಮಾನ್ಯ ಸದಸ್ಯರು ಹೇಳಿದರು. ಈ ಕೆಲಸವನ್ನು ಕೇಂದ್ರ ಸರ್ಕಾರದವರು ಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ. ನಮ್ಮ ಉದ್ದೇಶ ಏನು ಇದೆಯೋ ಅದನ್ನು ನಿವಾರಣೆ ಮಾಡುತ್ತಾರೆ ಎನ್ನುವ ದೃಷ್ಟಿಯನ್ನಿಟ್ಟುಕೊಂಡು ನಮ್ಮ ಅಧಿಕಾರವನ್ನು ಅವರಿಗೆ ಕೊಡಬೇಕಾದರೆ ಒಂದು ವಿಶೇಷ ಸಂದರ್ಭ ಉಂಟಾಗಿದೆ.

ಶ್ರೀ ಎಸ್. ವೈ. ಪಾಟೀಲ್.—ನೀವು ಭೂಮಿತಿ ಬಗ್ಗೆ ಯಾವ ರೀತಿ ಒಂದು ಕಾನೂನು ತಂದರೂ ಅದೇ ರೀತಿ ಇದನ್ನೂ ತಂದಿದ್ದರೆ ಏನಾಗುತ್ತಿತ್ತು? ಇದನ್ನು ಒಂದು ಕಮಿಟೀ ರೆಫರ್ ಮಾಡಿ ಅವರಿಗೆ ಹೇಳಿದ್ದರೆ ಏನಾಗುತ್ತಿತ್ತು?

ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಫೆಡರಲ್ ಸಿಸ್ಟಂ ಇದೆ. ಮಧ್ಯೆ ಆಗಿದ್ದಾಗ್ಗೆ ಆಗುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಯೂನಿಟರಿ ಸಿಸ್ಟಂ ಇದ್ದರೆ ಅದು ಒಂದು ತರಹ. ಕೆಲವು ವೇಳೆ ನಮ್ಮಲ್ಲಿರತಕ್ಕಂಥ ಅಧಿಕಾರವನ್ನು ಅವರು ಚಲಾಯಿಸುತ್ತಾರೆ, ಕೆಲವು ವೇಳೆ ಅವರಿಗಿರತಕ್ಕಂಥ ಅಧಿಕಾರವನ್ನು ನಾವು ಚಲಾಯಿಸುತ್ತೇವೆ. ಈ ಫೆಡರಲ್ ಸಿಸ್ಟಂನಲ್ಲಿ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಸಿದ್ದಪ್ಪ. ಈಗ ತಾವು ಏನು ಹೇಳಿದಿರೋ ನಮ್ಮಲ್ಲಿರತಕ್ಕಂಥ ಅಧಿಕಾರವನ್ನು ಕೇಂದ್ರದವರು ಚಲಾಯಿಸಬಹುದು, ಅವರಿಗೆ ಇರುವ ಕೆಲವು ಅಧಿಕಾರಿಗಳನ್ನು ನಾವು ಚಲಾಯಿಸಬಹುದೆಂದು ಅದಕ್ಕೆ ನಾನು ಕೇಳುವುದು ಅವರಿಗೆ ಇರತಕ್ಕಂಥ ಅಧಿಕಾರವನ್ನು ನೀವು ಚಲಾಯಿಸಿರುವುದಕ್ಕೆ ಏನಾದರು ಉದಾಹರಣೆ ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂಥಹ ಸಂದರ್ಭಗಳು ಉಂಟಾಗಿರುವುದು ನಮ್ಮಲ್ಲಿ ಬಹಳ ಇಲ್ಲ.

ಶ್ರೀ ವಿಶ್ವನಾಥ ರೆಡ್ಡಿ.—ಮಾನ್ಯ ಮಂತ್ರಿಗಳು ಹೇಳಿದರು ಫೆಡರಲ್ ಸಿಸ್ಟಂನಂತೆ ರಾಜ್ಯದ ಕೆಲವು ಅಧಿಕಾರವನ್ನು ಅವರು ಚಲಾಯಿಸಬಹುದು. ನಾವೂ ಕೂಡ ಕೇಂದ್ರದವರು ಕೆಲವು ಅಧಿಕಾರವನ್ನು ಚಲಾಯಿಸ ಬಹುದು ಎಂದು. ಇಡೀ ವಿಶ್ವದ ಯಾವ ರಾಜ್ಯದಲ್ಲಿ ಇಂತಹ ಸಿಸ್ಟಂ ಬಂದಿರುವುದು ಇದ್ದರೆ ತೋರಿಸಿಕೊಡಿ, ಫೆಡರಲ್ ಸಿಸ್ಟಂ ಪ್ರಕಾರ ಸ್ಟೇಟ್‌ನ ಅಧಿಕಾರ ವ್ಯಾಪ್ತಿ ಏನು, ಸೆಂಟ್ರಲ್ ಇರತಕ್ಕ ಅಧಿಕಾರ ವ್ಯಾಪ್ತಿ ಏನು ಎನ್ನುವುದನ್ನು ಕಾನ್ಸ್‌ಟ್ಯೂಷನ್‌ನಲ್ಲಿ ಸ್ಪಷ್ಟವಾಗಿ ಕೊಟ್ಟಿದೆ. ಆದರೆ ನೀವು ಹೇಳಿದಂತೆ ಅವರ ಒಂದು ಅಧಿಕಾರವನ್ನು ಇಡೀ ವಿಶ್ವದಲ್ಲಿ, ಯಾವ ರಾಜ್ಯದಲ್ಲಿ ಚಲಾಯಿಸಿದ್ದಾರೆ ಅನ್ನುವುದನ್ನು ತೋರಿಸಿಕೊಡಬೇಕು ಎಂಬುದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಸ್ಟೇಟ್ ಲಿಸ್ಟ್ ಬೇರೆ ಇದೆ, ಸೆಂಟ್ರಲ್ ಲಿಸ್ಟ್ ಬೇರೆ ಇದೆ, ಕನ್‌ಕರೆಂಟ್ ಲಿಸ್ಟ್ ಬೇರೆ ಇದೆ ರಾಜ್ಯಾಂಗ ಶಾಸನವನ್ನು ಓದಿ ಕರಗತ ಮಾಡಿಕೊಂಡಿರತಕ್ಕ ಮಾನ್ಯ ಸಭೆಗೆ ವಿವರ ತಿಳಿಸಬೇಕಾದುದು ಅಗತ್ಯವಿಲ್ಲ. ಇಂತಹ ಒಂದು ನಿರ್ಣಯವನ್ನು ತಂದು ಲೋಕ ಸಭೆಗೆ ಈ ಜವಾಬ್ದಾರಿಯನ್ನು ನಾವು ವಹಿಸಿ ಕೊಡುತ್ತಿದ್ದೇವೆ ಎಂದು ಶ್ರೀಮಾನ್ ಎಸ್. ವೈ. ಪಾಟೀಲರು ಹೇಳಿದರು. ಮುಂದೆ ತಿದ್ದುಪಡಿ ತರಬೇಕಾದರೂ ಅವರಿಗೆ ಅಧಿಕಾರವಿದೆಯೆಂದು ತಿಳಿಸಿದರು. ನಿಜ, ನಿರ್ಣಯ ಮಾಡಿ ಶಾಸನ ಮಾಡುವ ಅಧಿಕಾರ ಅವರಿಗೆ ಕೊಟ್ಟರೆ ಮುಂದೆ ತಿದ್ದುಪಡಿ ತರತಕ್ಕಂಥ ಅಧಿಕಾರ ಕೂಡ ಅವರಿಗೆ ಇರುತ್ತದೆ. ನಮಗೆ ಕೇಂದ್ರ ಸರ್ಕಾರದ ಉದ್ದೇಶದಲ್ಲಿ ಪೂರ್ಣ ವಿಶ್ವಾಸ ಇರುವುದು ಒಂದನೆಯ ಅಂಶ. ಎರಡನೇಯದು ಕೇಂದ್ರದವರೇ ಮಾಡಿದರೆ ಸಮಂಜಸವಾದ ಏಕರೀತಿ ಕಾನೂನು ತರುವುದಕ್ಕೆ ಮತ್ತು ಎಲ್ಲರನ್ನೂ ಒಂದು ಮಿತಿಗೆ ಒಳಪಡಿಸುವುದಕ್ಕೆ ಸಾಧ್ಯ ಎನ್ನುವ ದೃಷ್ಟಿಯಂದ ಇದನು ತಂದಿದ್ದೇವೆ. ಆದ್ದರಿಂದ ಈ ನಿರ್ಣಯಕ್ಕೆ ತಮ್ಮ ಬೆಂಬಲ ಕೊಡಬೇಕೆಂದು ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಸೂಚನೆ ಮಾಡಿದೆ. ಕೇಂದ್ರಕ್ಕೆ ನಿರ್ಣಯ ಕಳುಹಿಸುತ್ತೀರಿ, ನಿರ್ಣಯದ ಜೊತೆಗೆ ಈ ಸರ್ಕಾರದ ಸ್ಪಷ್ಟವಾದ ಅಭಿಪ್ರಾಯವನ್ನು ತಾವು ಕಳುಹಿಸುತ್ತೀರಾ? ಡ್ರಾಫ್ಟ್ ಬಿಲ್ ಮಾಡಬೇಕು ಎಂದು ಯೋಚನೆ ಮಾಡಿದ್ದೀರಾ ? ಮಾಡಿದ್ದರೆ ಅದನ್ನು ಇದರ ಜೊತೆಯೊಳಗೆ ಕಳುಹಿಸಿಕೊಡುತ್ತೀರಾ? ಇದಕ್ಕೆ ತಮ ಅಭಿಪ್ರಾಯವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಡ್ರಾಫ್ಟ್ ಬಿಲ್ಲನ್ನು ತಯಾರುಮಾಡಿ ಕಳುಹಿಸಿ ಕೊಡುವಹಾಗಿದ್ದರೆ ಸಭೆಯ ಅಭಿಪ್ರಾಯ ಕೇಳಿ ಕಳುಹಿಸಿಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ನಮ್ಮನ್ನು ಕೇಳದೆ ಏತಕ್ಕೆ ಕಳುಹಿಸಿದಿರಿ ಎಂದು ಕೇಳಿದಾಗ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಬಿಲ್ ಒಂದು ಪಾಸ್ ಮಾಡಿ ಕಳುಹಿಸತಕ್ಕ ಪ್ರಸಂಗವಿಲ್ಲ. ಅವರಿಗೆ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಅಧಿಕಾರ ಕೊಟ್ಟಿರುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಅಡಕವಾಗಿರುವ ಅಂಶಗಳನ್ನು ತಾವು ಕಳುಹಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಿಲ್ಲನ್ನು ಎಂದೂ ಕಳಂಹಿಸುವುದಿಲ್ಲ, ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಕೇಂದ್ರದವರು ಮುಖ್ಯಮಂತ್ರಿಗಳ ಸಭೆ ಆಗಿಂದಾಗ್ಗೆ ನಡೆಸುತ್ತಾರೆ. ಆಗ ಸಮಾಲೋಚನೆ ಮಾಡಿದಾಗ ನಮ್ಮ ಅಭಿಪ್ರಾಯ ಏನು ಎಂದು ತಿಳಿಸಬೇಕೆ ಹೊರತು ತಯಾರು ಮಾಡಿದಂತಹ ಬಿಲ್ಲನ್ನು ಸಭೆ ವರೆಗೆ ಇಟ್ಟು ಸಭೆಯ ಅಭಿಪ್ರಾಯ ತೆಗೆದುಕೊಂಡು ಕಳುಹಿಸುವುದು ಇದ್ದರೆ ನಾವು ಅವರಿಗೆ ಕೊಡುವ ಅಧಿಕಾರವಾದರೂ ಯಾವುದು? ನನ್ನು ಸಲಹೆ ಹೀಗಿದೆ ಎಂದು ಶಿಫಾರಸ್ಸು ಮಾಡಿದ ಹಾಗೆ ಆಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಬೇರೆ ರಾಜ್ಯಗಳ ಸರ್ಕಾರದವರು ತಮ್ಮ ಅಧಿಕಾರವನ್ನು ಉಳಿಸಿಕೊಂಡಿದ್ದಾರೆ. ಹಾಗೆಯೇ ನಮ್ಮ ಸರ್ಕಾರದವರು ನಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಶಾಮಣ್ಣನವರು ಕೇಳಿದರು ಬೇರೆ ಬೇರೆ ರಾಜ್ಯದಲ್ಲಿ ಆಸ್ತಿ ಇಟ್ಟುಕೊಂಡಿದ್ದಾರೆ ಅವರನ್ನು ಈ ಮಿತಿಗೊಳಪಡಿಸಬೇಕಾಗುತ್ತದೆ ಎನ್ನುವ ವಾದವನ್ನು ಇಟ್ಟಿದ್ದಾರೆ. ಒಂದಕ್ಕಿಂಥ ಹೆಚ್ಚು ರಾಜ್ಯದಲ್ಲಿ ಆಸ್ತಿ ಇಟ್ಟುಕೊಂಡಿರುವವರ ಮೇಲೆ ಮಿತಿ ತರಬೇಕಾದರೆ ಕೇಂದ್ರದವರಿಗೆ ಮಾತ್ರ ಸಾಧ್ಯ.

ಶ್ರೀ ಎಚ್. ಎಸ್. ಸಿದ್ಧಪ್ಪ.— ಶ್ರೀಮಾನ್ ಕೃಷ್ಣನ್‌ರವರ ಭಯ ಏನು ಎಂದರೆ ಕೇಂದ್ರಕ್ಕೆ ಕೊಟ್ಟರೆ ಮುಂದಿನ ಸಾರಿ ಇಲ್ಲಿ ಈ ಸರ್ಕಾರ ಇರಬಹುದು. ಆಲ್ಲಿ ಒಂದು ವೇಳೆ ಸ್ವತಂತ್ರ ಪಾರ್ಟಿ ಅಧಿಕಾರಕ್ಕೆ ಬಂದರೆ ಹಾಳಾಗಿ ಹೋಗುತ್ತದೆ ಎಂದು ಭಯ?

ಶ್ರೀ ಎಂ. ಎಸ್. ಕೃಷ್ಣನ್. ನೀವು ಅಧಿಕಾರಕ್ಕೆ ಬಂದರೂ ಬರಬಹುದು. ನೀವು ಕಾಂಗ್ರೆಸ್ "ಟ್ರಿ"

MADAM SPEAKER:—I will put the resolution to the vote of the House. The question is:

"That whereas imposition of ceiling on urban immovable property and the acquisition of such property in excess of the ceiling limit with a view to utilising such excess for public purposes is a matter of general importance and the problems relating thereto are common to all the States:

And whereas legislation for the purpose mentioned above is relatable to matters enumerated in Entry 18 of List II of the Seventh Schedule to the Constitution of India with respect to which Parliament has no power to make a law for the State except as provided in articles 249 and 250 thereof;

And whereas for the purpose of securing uniformity in legislation, it is desirable that such legislation should be undertaken by Parliament;

Now, therefore, in pursuance of clause (1) of article 252 of the Constitution of India, this Assembly hereby resolves that the imposition of ceiling on urban immovable property and acquisition of such property in excess of the ceiling limit with a view to utilising such excess for public purposes and all other matters connected therewith or incidental thereto shall be regulated in this State by Parliament by law".

The motion was adopted

Discussion on the Report on the Scarcity condition prevailing in several parts of the state

SRI C M. ARUMUGAM.—Madam Speaker, with your permission I may intervene in the course of the discussions and say something as a matter of personal explanation; Therefore I request you now to permit Mr. Deve Gowda, Hon. Leader of the Opposition to initiate discussions on the Report.

MADAM SPEAKER.—Yes, Hon. Leader of Opposition to initiate the the debate. 1-00 p.m.

†ಶ್ರೀ ಎಚ್. ಡಿ. ದೇವೇಗೌಡ.—(ಹೊಳೆನರಸೀಪುರ) ಮಾನ್ಯ ಸಭಾಧ್ಯಕ್ಷಣಿಯವರೇ, ರಾಜ್ಯದಲ್ಲಿರ ತಕ್ಕ ಅಭಾವ ಪರಿಸ್ಥಿತಿಯ ಒಂದು ವಿಶ್ಲೇಷಣೆಯನ್ನ ಈ ಸಭೆಯ ಆದೇಶದ ಮೇಲೆ ತಾವೇ ಸ್ವತಃ ಖುದ್ದಾಗಿ ಪರಿಶೀಲನೆ ಮಾಡಿ ಈ ಸಭೆಗೆ ವರದಿಯನ್ನು ಶ್ರೀಮಾನ್ ಆರ್ಮುಗಂ ಅವರು ಒಪ್ಪಿಸಿದ್ದಾರೆ. ಅವರಿಗೆ ಸಿಕ್ಕಿದಂಥ ಬಹಳ ಕಡಿಮೆ ಕಾಲದಲ್ಲಿ ಹೆಚ್ಚು ಪ್ರಯತ್ನ ಮಾಡಿದ್ದಾರೆ ಎನ್ನುವುದು ನನ್ನ ವೈಯಂಕ್ತಿಕ ಅಭಿಪ್ರಾಯ. ಈ ಸಂದರ್ಭದಲ್ಲಿ ನಾನು ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಾರಣ ವಾದರೂ ಇಷ್ಟೇ, ಕೇವಲ ಒಂದು ವಾರದಲ್ಲಿ ಅವರು ಸುಮಾರು ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸಮಾಡಿ ಬಹು ತೀಕವಾಗಿ ನಾವು ಏನು ಅಪೇಕ್ಷೆ ಮಾಡಿದ್ದೆವೋ, ಆ ಎಲ್ಲಾ ಅಪೇಕ್ಷೆಗಳನ್ನು ಒಳಗೊಂಡ ರಿಪೋರ್ಟನ್ನು ಸಂಕ್ಷಿಪ್ತವಾಗಿ ಅವರು ಕೊಟ್ಟಿದ್ದಾರೆ. ಅವರ ಜೊತೆಯಲ್ಲಿ ನಮ್ಮ ಸ್ಟಾಫ್‌ನವರು ಬಹಳವಾಗಿ ಸಹಕರಿಸಿದ್ದಾರೆ. ಇಂಥ ಕಠಿಣವಾದ ಕೆಲಸವನ್ನು, ಕೇವಲ ೮ ದಿವಸದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸಮಾಡಿ,